

MAG(2)PRB/CR/165/2022-23 Title code: KARKAN27951

# ಮುಂಜಾನೆ ವಾರ್ತೆ

ಇ–ಪೇಪರ್: www.munjanevarthe.com

EDITOR: H.L.AMARANATH

MUNJANE VARTHE

ಸಂಪಾದಕ: ಹೆಚ್.ಎಲ್ ಅಮರನಾಥ್

ಕನ್ನಡ ದಿನಪತ್ರಿಕೆ



ಜಾಹೀರಾತಿಗಾಗಿ ಸಂಪರ್ಕಿಸಿ 9663122276

www.munjanevarthe.com



VOLUME : 2 ISSUE: 123 ಸಂಪುಟ: 02 ಸಂಚಿಕೆ: 123 ಪುಟಗಳು: 04 munjanevarthe 15 SATURDAY JUNE 2024 15 ಶನಿವಾರ ಜೂನ್ 2024 ₹ 2


ಪೊಲೀಸರ ಪ್ರಶ್ನೆಗಳಿಗೆ ಕುಗ್ಗಿಹೋದ "ಜಗ್ಗು ದಾದಾ" ವಿವರಪುಟ 02

ಅಂತರಂಗ ಪ್ರಕಾಶನ ಸಾಗರ ಇವರ ಪ್ರಕಾಶನದಲ್ಲಿ ಎರಡು ಪುಸ್ತಕಗಳನ್ನು ಬಿಡುಗಡೆ ವಿವರಪುಟ 03

ಲಂಚ: ಆಹಾರ ಇಲಾಖೆಯ ಉಪ ನಿರ್ದೇಶಕಿ, ಮಧ್ಯವರ್ತಿ ಲೋಕಾಯುಕ್ತ ಬಲೆಗೆ ವಿವರಪುಟ 04

# ಜಿ7 ಶೃಂಗಸಭೆ: ಇಟಲಿಗೆ ಹೊರಟ ಪ್ರಧಾನಿ ನರೇಂದ್ರ ಮೋದಿ

ನವದೆಹಲಿ: ಜಿ7 ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಪ್ರಧಾನಿ ನರೇಂದ್ರ ಮೋದಿ ಗುರುವಾರ ಸಂಜೆ ಇಟಲಿ ಪ್ರವಾಸ ಕೈಗೊಂಡರು. ಮೂರನೇ ಅವಧಿಗೆ ಪ್ರಧಾನಿಯಾದ ಬಳಿಕ ಮೋದಿ ಅವರಿಗಿದು ಮೊದಲ ವಿದೇಶ ಪ್ರವಾಸವಾಗಿದೆ. ಕೃತಕ ಬುದ್ಧಿಮತ್ತೆ (ಎಐ), ಇಂಧನ, ಆಫ್ರಿಕಾ ಮತ್ತು ಮೆಡಿಟರೇನಿಯನ್ ವಿಚಾರಗಳ ಮೇಲೆ ಚರ್ಚೆ ನಡೆಸಲಾಗುವುದು ಎಂದು ಅವರು ತಮ್ಮ ನಿರ್ಗಮನ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಇಟಲಿಗೆ ಹೊರಡುವುದಕ್ಕೂ ಮೊದಲು ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿರುವ ಮೋದಿ, ಪ್ರಧಾನಿ ಜಾರ್ಜಿಯಾ ಮೆಲೋನಿ ಅವರ ಆಹ್ವಾನದ ಮೇರೆಗೆ ಪ್ರವಾಸ ಹೋಗುತ್ತಿದ್ದೇನೆ. ಜೂನ್ 14 ರಂದು ಅಪುಲಿಯಾದಲ್ಲಿ ನಡೆಯುವ ಶೃಂಗದಲ್ಲಿ ಭಾಗವಹಿಸುವೆ. ವಿಶ್ವದ ಗಣ್ಯ ನಾಯಕರ ಜೊತೆಗೆ ಭೂಮಿ ಮತ್ತು ಜನರ ಜೀವನ ಸುಧಾರಿಸುವ ಬಗ್ಗೆ ವ್ಯಾಪಕ ಚರ್ಚೆ ನಡೆಸಲು ಎದುರು ನೋಡುತ್ತಿದ್ದೇನೆ ಎಂದು ಬರೆದುಕೊಂಡಿದ್ದಾರೆ.



ಪ್ರಧಾನಿ ಕಚೇರಿಯಿಂದ ಹೇಳಿಕೆ ಬಿಡುಗಡೆ ಮಾಡಲಾಗಿದ್ದು, ಮೂರನೇ ಅವಧಿಯಲ್ಲಿ ಮೊದಲ ಇಟಲಿ ಪ್ರವಾಸ ಇದಾಗಿದೆ. ಜಿ7 ಶೃಂಗಸಭೆಗೂ ಮುನ್ನ 2021ರಲ್ಲಿ ನಡೆದ ಜಿ20 ಶೃಂಗದಲ್ಲಿ ಭಾಗಿಯಾಗಿದ್ದೆ. ಕಳೆದ ವರ್ಷ ಇಟಲಿ ಪ್ರಧಾನಿ ಮೆಲೋನಿ ಅವರು ಎರಡು ಬಾರಿ ಭಾರತ ಭೇಟಿ ನೀಡಿದ್ದರು. ಈ ವೇಳೆ ದ್ವಿಪಕ್ಷೀಯ ಮಾತುಕತೆಯಲ್ಲಿ ಎರಡೂ ರಾಷ್ಟ್ರಗಳ ನಡುವಿನ ಸಂಬಂಧಗಳಿಗೆ ವೇಗ ಮತ್ತು ಗಾಢತೆ ನೀಡಲು ಪ್ರಯತ್ನಿಸಲಾಗಿತ್ತು. ಭಾರತ–ಇಟಲಿ ಪಾಲುದಾರಿಕೆಯಲ್ಲಿ ಇಂಡೋ–ಪೆಸಿಫಿಕ್ ಮತ್ತು ಮೆಡಿಟರೇನಿಯನ್ ಪ್ರದೇಶಗಳಲ್ಲಿ ಸಹಕಾರವನ್ನು ಬಲಪಡಿಸಲು ಬದ್ಧರಾಗಿದ್ದೇವೆ ಎಂದು ಮೋದಿ ತಿಳಿಸಿದ್ದಾರೆ.

ಏನಿದು ಜಿ7 ಶೃಂಗಸಭೆ: ಮಧ್ಯಪ್ರಾಚ್ಯ ರಾಷ್ಟ್ರಗಳಾದ ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್, ಇಟಲಿ, ಜರ್ಮನಿ, ಕೆನಡಾ ಮತ್ತು ಜಪಾನ್ ಒಳಗೊಂಡ ಒಕ್ಕೂಟವೇ ಜಿ7. ಇದನ್ನು ಸದಸ್ಯ ರಾಷ್ಟ್ರಗಳ ನಡುವೆ ವ್ಯಾಪಾರ, ಬಾಂಧವ್ಯ ಮತ್ತು ಅಂತಾರಾಷ್ಟ್ರೀಯ ವಿಷಯಗಳ ಮೇಲೆ ನಿಯಂತ್ರಣ ಸಾಧಿಸಲು ರಚಿಸಿಕೊಳ್ಳಲಾಗಿದೆ. ಈ ಮೊದಲು ಜಿ8 ಶೃಂಗವಾಗಿತ್ತು. ರಷ್ಯಾ ಇದರ ಸದಸ್ಯತ್ವ ಹೊಂದಿತ್ತು. 2014 ರಲ್ಲಿ ಕ್ರಿಮಿಯಾದ ಮೇಲೆ ಯುದ್ಧ ಮಾಡಿ ವಶಕ್ಕೆ ಪಡೆದ ಬಳಿಕ ಶೃಂಗದಿಂದ ಕೈಬಿಡಲಾಯಿತು. ಬಳಿಕ ಇದು 7 ರಾಷ್ಟ್ರಗಳ ಸದಸ್ಯತ್ವ ಹೊಂದಿದೆ. ಪ್ರತಿವರ್ಷವೂ ಶೃಂಗ ಸಭೆ ನಡೆಯಲಿದ್ದು, ಒಂದೊಂದು ದೇಶ ಆತಿಥ್ಯ ವಹಿಸುತ್ತದೆ. ಈ ಬಾರಿ ಇಟಲಿಯ ಸರದಿ.

## ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ 5 ಸಾವಿರ ಕೋಟಿ ಬಳಕೆ

ಬೆಂಗಳೂರು: ಕಲ್ಯಾಣ ಕರ್ನಾಟಕ ಭಾಗದಲ್ಲಿ 5 ಸಾವಿರ ಕೋಟಿ ರೂ.ಗಳ ವೆಚ್ಚದ ಯೋಜನೆಗಳನ್ನು ಜಾರಿ ಮಾಡಲು ಅನುವಾಗುವಂತೆ ಜು.15 ರೊಳಗೆ ಕ್ರಿಯಾಯೋಜನೆ ಸಿದ್ಧಪಡಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ.



ಗೃಹ ಕಚೇರಿ ಕೃಷ್ಣಾದಲ್ಲಿಂದು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ವ್ಯಾಪ್ತಿಯ ಪ್ರಗತಿ ಪರಿಶೀಲನೆ ನಡೆಸಿದರು.

ಚುನಾವಣಾ ಪ್ರಣಾಳಿಕೆಯಲ್ಲಿ ಹಾಗೂ ಆಯವ್ಯಯದಲ್ಲಿ ವರ್ಷಕ್ಕೆ 5 ಸಾವಿರ ಕೋಟಿ ರೂ. ಒದಗಿಸುವ ಭರವಸೆ ನೀಡಲಾಗಿದೆ. ಈ ಮೊತ್ತವನ್ನು ವೆಚ್ಚ ಮಾಡಲು ಅನುವಾಗುವಂತೆ ಜು. 15 ರೊಳಗೆ ಕ್ರಿಯಾ ಯೋಜನೆ ಸಿದ್ಧಪಡಿಸುವಂತೆ ಸೂಚಿಸಿದರು. ಈಗ ಅನುಮೋದನೆಯಾದ ಟೆಂಡರ್ ಕರೆಯದೆ ಇರುವ ಕಾಮಗಾರಿಗಳಿಗೆ ಕೂಡಲೇ ಟೆಂಡರ್ ಕರೆಯಬೇಕು, ಕಾಮಗಾರಿಗಳ ಮೌಲ್ಯಮಾಪನ ಮಾಡಬೇಕು ಎಂದು ಆದೇಶಿಸಿದರು.

ಒಟ್ಟು 14,228 ಕೋಟಿ ಅನುದಾನದಲ್ಲಿ 10,342.90 ಕೋಟಿ ವೆಚ್ಚವಾಗಿದೆ. 2885.90 ಕೋಟಿ ಉಳಿದಿದೆ. ಬಾಕಿ ಉಳಿದ ಕಾಮಗಾರಿಗಳ

ಪುಟ 2ಕ್ಕೆ

## ಮಕ್ಕಳ ದಾಖಲಾತಿ ಕುಸಿತಕ್ಕೆ ಶಿಕ್ಷಕರೇ ನೇರಹೊಣೆ

*ರಾಜ್ಯದ ಸರಕಾರಿ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣವಿಲ್ಲದೇ ಫಲಿತಾಂಶ ಪಾತಾಳಕ್ಕೆ ತಲುಪಿ ದಾಖಲಾತಿ ಪ್ರತಿವರ್ಷ ಕುಸಿತ ಕಾಣುತ್ತಿದೆ. ಶಿಕ್ಷಕರು ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ಜಾಗೃತೆ ವಹಿಸುವ ರೀತಿಯಲ್ಲಿ ಸರಕಾರಿ ಶಾಲೆಯ ಮಕ್ಕಳ ಶಿಕ್ಷಣದ ಬಗ್ಗೆ ಯೋಚಿಸಬೇಕಿದೆ. ಶೇ.100ರಷ್ಟು ಫಲಿತಾಂಶ ಪಡೆದಿರುವ ಶಾಲೆಗಳ ಬಗ್ಗೆ ಹೆಮ್ಮೆಯಿದೆ. ಮಕ್ಕಳ ಭವಿಷ್ಯ ಹಾಳು ಮಾಡುವ ಅಧಿಕಾರ ಶಿಕ್ಷಕರಿಗೆ ಇಲ್ಲ. 2025ಕ್ಕೆ ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ಮತ್ತೇ ಇದೇ ಫಲಿತಾಂಶ ಬಂದರೇ ಶಿಕ್ಷಣ ಇಲಾಖೆಯೇ ನೇರಹೊಣೆ.*

ಕೊರಟಗೆರೆ:– ಸರಕಾರಿ ಶಾಲೆಯ ದಾಖಲಾತಿ ಕುಸಿತ ಮತ್ತು ಫಲಿತಾಂಶ ಕಡಿಮೆ ಆಗಲು ಶಿಕ್ಷಕರೇ ನೇರಹೊಣೆ. ಕಾಟಚಾರಕ್ಕೆ ಶಾಲೆಯಲ್ಲಿ ಶಿಕ್ಷಣ ಇಲಾಖೆಯ ಕಾರ್ಯಕ್ರಮ ಆಯೋಜನೆ ಮಾಡ್ತಿರಾ. ನಾನು ಸಚಿವ ಅನ್ನೋದೆ ನಿಮಗೇ ಇನ್ನೂ ಗೊತ್ತಿಲ್ಲ ಅನ್ಸುತ್ತೆ. ಇನ್ನೂ ಶಾಸಕ ಅಂದುಕೊಂಡೇ ಇದೀಯಾ ಅಲ್ವಾ. ಅಮಾನತು ಮಾಡಿ ಮನೆಗೆ ಕಳಿಸಿದ್ರೇ ಗೋತ್ತಾಗುತ್ತೆ ಎಂದು ಡಿಡಿಪಿಐ ಮಂಜುನಾಥ ಮತ್ತು ಬಿಇಓ ನಟರಾಜುಗೆ ಗೃಹಸಚಿವ ಡಾ.ಜಿ.ಪರಮೇಶ್ವರ ಖಡಕ್ ಎಚ್ಚರಿಕೆ ನೀಡಿದರು.

ಕೊರಟಗೆರೆ ತಾಲೂಕು ಕಸಬಾ ಹೋಬಳಿಯ ಹುಲೀಕುಂಟೆ ಮತ್ತು ಜೆಟ್ಟಿಅಗ್ರಹಾರ ಗ್ರಾಮದಲ್ಲಿ ಶಿಕ್ಷಣ,

ಪುಟ 2ಕ್ಕೆ



## ನೆಕ್ಸಾನ್ ಇವಿ ಕೂಡ ಭಾರತ್-ಎನ್‌ಸಿಎಪಿಯಿಂದ 5-ಸ್ಟಾರ್ ರೇಟಿಂಗ್ ಪಡೆದಿದೆ

ಬೆಂಗಳೂರು: ಟಾಟಾ ಮೋಟಾರ್ಸ್‌ನ ಅಂಗಸಂಸ್ಥೆ ಮತ್ತು ಭಾರತದ ಇವಿ ಕ್ರಾಂತಿಯ ಪ್ರವರ್ತಕರಾಗಿರುವ ಟಾಟಾ ಪ್ಯಾಸೆಂಜರ್ ಎಲೆಕ್ಟ್ರಿಕ್ ಮೊಬಿಲಿಟಿ ಲಿಮಿಟೆಡ್ (ಟಿಪಿಇಎಂ) ಇಂದು ಮಹತ್ವದ ಪ್ರಕಟಣೆಯಲ್ಲಿ ಪಂಚ್.ಇವಿ ಮತ್ತು ನೆಕ್ಸಾನ್.ಇವಿ ಭಾರತ್–ಎನ್‌ಸಿಎಪಿಯಿಂದ 5–ಸ್ಟಾರ್ ರೇಟಿಂಗ್ ಪಡೆದಿದೆ



ಎಂದು ಘೋಷಿಸಿದೆ. ಪಂಚ್.ಇವಿ ಇಲ್ಲಿಯವರೆಗೆ ಯಾವುದೇ ವಾಹನ ಕೂಡ ಗಳಿಸದೇ ಇದ್ದ ಅತ್ಯಧಿಕ ಸ್ಕೋರ್ ಪಡೆಯುವ ಮೂಲಕ ಮೈಲಿಗಲ್ಲು ಸ್ಥಾಪಿಸಿದೆ. ಪಂಚ್.ಇವಿ ಅಡಲ್ಟ್ ಆಕ್ಯುಪೆಂಟ್ಸ್ ಪ್ರೊಟೆಕ್ಷನ್(ಎಓಪಿ) ಅಂದ್ರೆ

ಪುಟ 2ಕ್ಕೆ

## ಕೇಂದ್ರ ಸಚಿವ ವಿ.ಸೋಮಣ್ಣ ಕೊರಟಗೆರೆ ಪ್ರತಿಷ್ಠಿತ ಮಠಗಳಿಗೆ ಭೇಟಿ..



ಕೊರಟಗೆರೆ:– ರಾಜ್ಯದ ಪ್ರತಿಷ್ಠಿತ ಮೂಲಗಳಾದ ಕೊರಟಗೆರೆ ತಾಲೂಕಿನ ಎಲೆರಾಂಪುರದ ಕುಂಚಿಟಿಗ ಮಹಾಸಂಸ್ಥಾನ ಮಠ ಹಾಗೂ ಸಿದ್ದರಬೆಟ್ಟದ ಶ್ರೀ ರಂಭಾಪುರಿ ಮಠಕ್ಕೆ ಭೇಟಿ ನೀಡಿದ ಕೇಂದ್ರ ಜಲಶಕ್ತಿ ಹಾಗೂ ರಾಜ್ಯ ರೈಲ್ವೆ ಸಚಿವರಾದ ವಿ. ಸೋಮಣ್ಣ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮೀಜಿಗಳು ಹಾಗೂ ಡಾ .ಶ್ರೀ ಹನುಮಂತನಾಥ ಮಹಾಸ್ವಾಮೀಜಿಗಳ ಆಶೀರ್ವಾದ ಪಡೆದರು.

ಕೇಂದ್ರದಲ್ಲಿ ಅಧಿಕಾರ ಸ್ವೀಕಾರ ಮಾಡಿದ ನಂತರ ಪ್ರಥಮ ಬಾರಿಗೆ ಕೊರಟಗೆರೆಗೆ ಆಗಮಿಸಿದ ಸಂದರ್ಭದಲ್ಲಿ

ಪುಟ 2ಕ್ಕೆ

## ಎಚ್ಡಿಕೆ ಆಗಮನ ಬರದ ಸಿದ್ದತೆ

ಮದ್ದೂರು: ಭಾರತ ಸರ್ಕಾರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಎಚ್.ಡಿ. ಕುಮಾರಸ್ವಾಮಿ ಅವರು, ಮೊದಲ ಬಾರಿಗೆ ಜೂ. 15 ರಂದು, 2 ಗಂಟೆಗೆ ತಾಲೂಕಿಗೆ ಆಗಮಿಸುತ್ತಿದ್ದು ಅವರನ್ನು ಸ್ವಾಗತಿಸಲು ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಮಾಜಿ ಸಚಿವ ಡಿ.ಸಿ. ತಮ್ಮಣ್ಣ ಹೇಳಿದರು.



ಪಟ್ಟಣದ ತಮ್ಮ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಚ್.ಡಿ. ಕುಮಾರಸ್ವಾಮಿ ಅವರು ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಮೊದಲ ಬಾರಿಗೆ ತಾಲೂಕಿಗೆ ಆಗಮಿಸುತ್ತಿರುವುದರಿಂದ ನಿಡಘಟ್ಟ ಗಡಿಯಿಂದ ಗೆಜ್ಜಲಗೆರೆ ಗ್ರಾಮದ ವರೆಗೆ ತೆರೆದ ವಾಹನದಲ್ಲಿ ಮೆರವಣಿಗೆಯ ಮೂಲಕ ನೂತನ ಸಚಿವರನ್ನು ಕರೆತರಲಾಗುವುದು ಎಂದರು.

ನಿಡಘಟ್ಟ ಗ್ರಾಮದಿಂದ ಮದ್ದೂರು ಪಟ್ಟಣದವರೆಗೆ ಬೃಹತ್ ಬೈಕ್ ಜಾಥಾ ಹಮ್ಮಿಕೊಳ್ಳಲಾಗಿದೆ. ಆದ್ದರಿಂದ ಜೆಡಿಎಸ್ ಮತ್ತು ಬಿಜೆಪಿ ಪಕ್ಷದ ಕಾರ್ಯಕರ್ತರು, ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಜೂ.16 ರಂದು ಮಂಡ್ಯದಲ್ಲಿ ಆಯೋಜಿಸಿದ್ದ ಬೃಹತ್ ಕಾರ್ಯಕ್ರಮವನ್ನು ರದ್ದುಗೊಳಿಸಲಾಗಿದ್ದು, ಮುಂದಿನ ದಿನಗಳಲ್ಲಿ ಬೃಹತ್ ಕಾರ್ಯಕ್ರಮವನ್ನು ರೂಪಿಸಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರನ್ನು ಅಭಿನಂದಿಸಲಾಗುವುದು ಎಂದು ಮಾಹಿತಿ ನೀಡಿದರು. ಪತ್ರಿಕಾಗೋಷ್ಠಿಯಲ್ಲಿ ಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ. ಸಂದರ್ಶ, ಜೆಡಿಎಸ್ ತಾಲ್ಲೂಕು ಕಾರ್ಯಾಧ್ಯಕ್ಷ ಮಾದನಾಯಕನಹಳ್ಳಿ ರಾಜಣ್ಣ, ಪುರಸಭಾ ಸದಸ್ಯರಾದ ಸುರೇಶ್ ಕುಮಾರ್, ಮಹೇಶ್, ಪ್ರಸನ್ನ, ಪ್ರಮೀಳಾ, ಮುಖಂಡರಾದ ಶಿವನಂಜಯ್ಯ, ನಿಲುವಾಗಿಲು ರಾಧಕೃಷ್ಣ, ಎಂ.ಜಿ. ಗೂಳೇಶ್ ಸೇರಿದಂತೆ ಇತರರು ಇದ್ದರು.


ಜಗತ್ತಿನ ಯಾವುದೇ ಮೂಲೆಯಲ್ಲಿ ಕುಳಿತು ಮುಂಜಾನೆವಾರ್ತೆ ಓದಿ...

www.munjanevarthe.com

ಮುಂಜಾನೆ ವಾರ್ತೆ ಕನ್ನಡ ದಿನಪತ್ರಿಕೆ ಓದುಗುವುದು ಈಗ ಮತ್ತಷ್ಟು ಸುಲಭ

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ-ಪೇಪರ್: www.munjanevarth.com
ಶನಿವಾರ 15 ಜೂನ್ 2024
Saturday 15 June 2024

# ಹಸಿರೇ ಗ್ರಾಮ ಕಾರ್ಯಕ್ರಮಕ್ಕೆ ಚಾಲನೆ..

ಪುಟ 1ರಿಂದ

ಯಾವ ದೇಶದಲ್ಲಿ ಅರಣ್ಯದ ವಿಸ್ತೀರ್ಣ ಶೇ.50ಕ್ಕಿಂತ ಹೆಚ್ಚಿರುತ್ತೋ ಅಂತಹ ದೇಶದಲ್ಲಿ ಮಳೆಬೆಳೆ ಚೆನ್ನಾಗಿ ಆಗುತ್ತೆ. ಭಾರತ ದೇಶವು ಶೇ.21ರಷ್ಟು ಅರಣ್ಯ ಪ್ರದೇಶವನ್ನು ಮಾತ್ರ ಹೊಂದಿದೆ. ರಾಜ್ಯದಲ್ಲಿ ಶೇ.19,20ರಷ್ಟು ಮಾತ್ರ ಅರಣ್ಯ ಪ್ರದೇಶವಿದೆ. ತುಮಕೂರು ಜಿಲ್ಲೆಯ 10ತಾಲೂಕಿನಲ್ಲಿ 50ಸಾವಿರ ಸಸಿಗಳನ್ನು ನೇಡಲಾಗ್ತಿದೆ. ಪ್ರತಿ 3ತಿಂಗಳಿಗೊಮ್ಮೆ ಸಸಿಗಳ ಪ್ರಗತಿಯ ಅಂಕಿಅಂಶದ ವರದಿಯ ಪರಿಶೀಲನೆಗೆ ಜಿಪಂ ಸಿಇಓಗೆ ಸೂಚಿಸಲಾಗಿದೆ ಎಂದು ಕೊರಟಗೆರೆ ಸಮೀಪದ ರಂಗನಾಥಸ್ವಾಮಿ ಗುಟ್ಟೆ ಬಳಿ 900ಸಸಿಗಳನ್ನು ನೇಡುವ ಹಸಿರು ಗ್ರಾಮ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ವೇಳೆ ಮಾತನಾಡಿದರು.

ಉಳುಮೆ ಮಾಡಿ ಬಿತ್ತನೆಗೆ ಚಾಲನೆ.. : ಕೊರಟಗೆರೆ ತಾಲೂಕಿನ ಹಂಚಿಹಳ್ಳಿ ಗ್ರಾಪಂಯ ಗೊಲ್ಲದೇವನಹಳ್ಳಿಯ ರೈತ ಚೆನ್ನಪ್ಪ ಜಮೀನಿನಲ್ಲಿ ಟ್ರಾಕ್ಟರ್‌ನಿಂದ ಉಳುಮೆ ಮಾಡಿ ಸ್ವತಃ ಗೃಹಸಚಿವರೇ ಬಿತ್ತನೆ ಮಾಡಿ ಬಿತ್ತನೆಬೀಜ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕೊರಟಗೆರೆ ತಾಲೂಕಿನಲ್ಲಿ 37ಸಾವಿರ ಹೇಕ್ಟೇರ್ ಬಿತ್ತನೆ ಗುರಿಯಿದೆ. ಇಲ್ಲಿಯವರೇಗೆ 340ಹೇ ಪ್ರದೇಶದಲ್ಲಿ ಬಿತ್ತನೆ ನಡೆದಿದೆ. ಪ್ರಸ್ತುತ 891ಕಿಂಟ್ವಾಲ್ ಬಿತ್ತನೆಬೀಜ ರೈತರಿಗೆ ವಿತರಣೆ ಮಾಡಲಾಗಿದೆ. 2924ಕ್ಷಿಂ ಬಿತ್ತನೆಬೀಜ ವಿತರಣೆಯ ಗುರಿಯಿದೆ. 2023–24ನೇ ಸಾಲಿನ ಕರ್ನಾಟಕ ರೈತಸುರಕ್ಷಾ ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯಡಿ ಕೊರಟಗೆರೆಯ 9572ಜನ ರೈತರಿಗೆ 11ಕೋಟಿಗೂ ಅಧಿಕ ವಿಮಾ ಪರಿಹಾರ ಬಂದಿದೆ ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ್ ರೈತರಿಗೆ ಮಾಹಿತಿ ನೀಡಿದರು.

ಡಾ.ಜಿ.ಪರಮೇಶ್ವರ್. ಗೃಹಸಚಿವರು.

24ಗ್ರಾಪಂಗೆ 24ಸಾವಿರ ಸಸಿಗಳು..

ಕೊರಟಗೆರೆಯ 24ಗ್ರಾಪಂಯಲ್ಲೂ ಕನಿಷ್ಠ 1ಸಾವಿರ ಸಸಿಗಳನ್ನು ಹಸಿರು ಗ್ರಾಮ ಅಭಿಯಾನದಡಿ ನೆಟ್ಟು ಮುಂದಿನ 3ವರ್ಷಗಳ ಕಾಲ ಸಂರಕ್ಷಿಸಿ ಶೇ.100ರಷ್ಟು ಗಿಡಗಳನ್ನು ಉಳಿಸಿ ಬೆಳೆಸಬೇಕಿದೆ. ಸಾರ್ವಜನಿಕರು ಮತ್ತು ಸ್ಥಳೀಯರನ್ನು ಹಸಿರಿಕರಣ ಕಾರ್ಯಕ್ರಮ ಅರಿವು ಮೂಡಿಸೋದೇ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ. ಗ್ರಾಪಂ ಆಡಳಿತವರ್ಗ ಹಸಿರು ಗ್ರಾಮಕ್ಕೆ ವಿಶೇಷ ಆಧ್ಯತೆ ನೀಡಬೇಕಿದೆ ಎಂದು ತುಮಕೂರು ಜಿಪಂ ಸಿಇಓ ಪ್ರಭು.ಜಿ ಸೂಚನೆ ನೀಡಿದರು.

ಕೃಷಿ ಮತ್ತು ಸಾಮಾಜಿಕ ವಲಯ ಅರಣ್ಯದಿಂದ ಶುಕ್ರವಾರ ಏರ್ಪಡಿಸಲಾಗಿದ್ದ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ, ರೈತರಿಗೆ ಬಿತ್ತನೆಬೀಜ ವಿತರಣೆ ಮತ್ತು ಹಸಿರುಗ್ರಾಮ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ನಂತರ ಮಾತನಾಡಿದರು.

ಶಿಕ್ಷಣ ಇಲಾಖೆ ನನಗೇ ಬಹಳ ಪ್ರೀಯವಾದ ಕ್ಷೇತ್ರ. ನಾನು 5ವರ್ಷ ಶಿಕ್ಷಣ ಮಂತ್ರಿಯಾಗಿ ಕೆಲಸ ಮಾಡಿದ್ದೀನಿ. ಫಲಿತಾಂಶದ ಸಮಸ್ಯೆಯ ಬಗ್ಗೆ ಪರಿಶೀಲನೆ ನಡೆಸುವ ಜವಾಬ್ದಾರಿ ಶಿಕ್ಷಣ ಇಲಾಖೆಗೆ ಸೇರಿದ್ದು. 2025ಕ್ಕೆ ಮತ್ತೇ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಇದೇ ಫಲಿತಾಂಶ ಬಂದರೇ ಅಮಾನತು ಮಾಡೋದೆ ಮಾರ್ಗ. ಗುಣಮಟ್ಟದ ಶಿಕ್ಷಣದ ವಿಚಾರದಲ್ಲಿ ನಿರ್ಲಕ್ಷ ವಹಿಸುವ ಶಿಕ್ಷಕರನ್ನು ಅಮಾನತು ಮಾಡುವಂತೆ ಜಿಪಂ ಸಿಇಓ ಪ್ರಭುಗೆ ಸೂಚನೆ ನೀಡಿದರು. ನಾನು ಸರಕಾರದ ಭಾಗ ಸರಕಾರವೇ ಶಿಕ್ಷಣ ಇಲಾಖೆ ಕಾರ್ಯಕ್ರಮಕ್ಕೆ ನಿಮ್ಮೂರಿಗೆ ಬಂದಾಗ ಮಕ್ಕಳ ಜೊತೆ ಪೋಷಕರು ಇರಬೇಕು ಅಲ್ವಾ. ನಮ್ಮ ದೇಶದ ಸಂಸ್ಕೃತಿ, ಸಂಸ್ಕಾರ ತಿಳಿಸೋದು ಉಪನ್ಯಾಸಕರ ಕರ್ತವ್ಯ. ಆದರೇ ಕಾರ್ಯಕ್ರಮದ ವೇಳೆ ಶಿಕ್ಷಕರೇ ಪ್ರಾರ್ಥನೆ ಮಾಡ್ತಾರೇ ಮಕ್ಕಳಿಂದ ಮಾಡಿಸಿಲ್ಲ.

ಮಕ್ಕಳ ಶಿಕ್ಷಣಕ್ಕಾಗಿ ಸರಕಾರ ಪ್ರತಿವರ್ಷ ಸಾವಿರಾರು ಕೋಟಿ ಅನುಧಾನ ನೀಡ್ತಿದೆ. ಪ್ರಸ್ತುತ ಕೊರಟಗೆರೆಯ 12ಸಾವಿರ ಮಕ್ಕಳಿಗೆ ಸಮವಸ್ತ್ರ ಮತ್ತು 14ಸಾವಿರ ಮಕ್ಕಳಿಗೆ ಪಠ್ಯಪುಸ್ತಕ ವಿತರಣೆ ಮಾಡಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಶುಭಕಲ್ಯಾಣ್, ಜಿಪಂ ಸಿಇಓ ಜಿ.ಪ್ರಭು, ಪೊಲೀಸ್ ವರೀಷ್ಠಾಧಿಕಾರಿ ಕೆ.ವಿ.ಅಶೋಕ್, ಜಿಲ್ಲಾ ಕಾಂಗ್ರೇಸ್ ಅಧ್ಯಕ್ಷ ಚಂದ್ರಶೇಖರಗೌಡ, ಉಪಅರಣ್ಯ ಸಂರಕ್ಷಣಾಧಿಕಾರಿ ಅನುಪಮ, ತಹಶೀಲ್ದಾರ್ ಮಂಜುನಾಥ.ಕೆ, ಸಾಮಾಜಿಕ ವಲಯ ಅರಣ್ಯಾಧಿಕಾರಿ ಶಿಲ್ಪಾ, ಕೃಷಿ ಇಲಾಖೆಯ ರುದ್ರಪ್ಪ ಸೇರಿದಂತೆ ಇತರರು ಇದ್ದರು.

# ಪ್ರಗತಿ ಪರಿಶೀಲನಾ ತುರ್ತು ಸಭೆಯಲ್ಲಿ ಶಾಸಕ ಹಾಗೂ ಕರ್ನಾಟಕ ರಾಜ್ಯ ಸಾಭೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ ಸಿ.ಎಸ್.ನಾಡಗೌಡ(ಅಪ್ಪಾಜಿ)

ಕಳೇದ ನಾಲತವಾಡ ಪಟ್ಟಣದಲ್ಲಿ ನಡೆದ ಹೋರಾಟವೂ ರಾಜಕೀಯ ಪ್ರೇರಿತವಾಗಿದ್ದು ಇದರಲ್ಲಿ ಶಿವಾನಂದ ವಾಲಿ ಅವನೊಬ್ಬ ಯುವ ಹೋರಾಟಗಾರ ಅಮಾಯಕ ಇದರಲ್ಲಿ ಅವನದೇನು ತಪ್ಪಿಲ್ಲ ಆದರೇ ಅವನನ್ನು ಮುಂದೇ ಮಾಡಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಕೆಲವರು ಮುಂದಾಗಿದ್ದಾರೆ ಎಂದು ಹೆಸರು ಹೇಳದೇ ವಾಗ್ದಾಳಿ ನಡೆಸಿದರು.



ಮುದ್ದೇಬಿಹಾಳ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಗುರುವಾರ ನಡೆದ ಆಲಮಟ್ಟಿಯ ಕೃಷ್ಣಾಭಾಗ್ಯ ಜಲನಿಗಮ ಮಂಡಳಿಯ ಎಲ್ಲ ವಿಭಾಗದ ಅಧಿಕಾರಿಗಳ ಪ್ರಗತಿ ಪರಿಶೀಲನಾ ತುರ್ತು ಸಭೆಯಲ್ಲಿ ಶಾಸಕ ಹಾಗೂ ಕರ್ನಾಟಕ ರಾಜ್ಯ ಸಾಭೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ ಸಿ ಎಸ್ ನಾಡಗೌಡ(ಅಪ್ಪಾಜಿ) ಮಾತನಾಡಿದರು.

ಮುದ್ದೇಬಿಹಾಳ: ತಾಂತ್ರಿಕ ಸಮಸ್ಯೆಯಿಂದಾಗಿ ಬಾಕಿ ಉಳಿದಿರುವ ಚಿಮ್ಮಲಗಿ ಏತ ನಿರಾವರಿ ಕಾಮಗಾರಿ ಸಂಪೂರ್ಣಗೊಳಿಸುವ ಮೂಲಕ ರೈತರ ಹೊಲಗಳಿಗೆ ನೀರು ಹರಿಸುವಂತಾಗಬೇಕು ಅದಕ್ಕೇ ಬೇಕಾದ ಸರಕಾರದಿಂದ ಎಲ್ಲ ಸಹಕಾರ ಇಲಾಖೆಗೆ ನೀಡುತ್ತದೆ ಎಂದು ಶಾಸಕ ಹಾಗೂ ಕರ್ನಾಟಕ ರಾಜ್ಯ ಸಾಭೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ ಸಿ ಎಸ್ ನಾಡಗೌಡ(ಅಪ್ಪಾಜಿ) ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಗುರುವಾರ ನಡೆದ ಆಲಮಟ್ಟಿಯ ಕೃಷ್ಣಾಭಾಗ್ಯ ಜಲನಿಗಮ ಮಂಡಳಿಯ ಎಲ್ಲ ವಿಭಾಗದ ಅಧಿಕಾರಿಗಳ ಪ್ರಗತಿ ಪರಿಶಿಲನಾ ತುರ್ತು ಸಭೆಯಲ್ಲಿ ಅವರು ಮಾತನಾಡಿದರು.

ಕಳೇದ ನಾಲತವಾಡ ಪಟ್ಟಣದಲ್ಲಿ ನಡೆದ ಹೋರಾಟವೂ ರಾಜಕೀಯ ಪ್ರೇರಿತವಾಗಿದ್ದು ಇದರಲ್ಲಿ ಶಿವಾನಂದ ವಾಲಿ ಅವನೊಬ್ಬ ಯುವ ಹೋರಾಟಗಾರ ಅಮಾಯಕ ಇದರಲ್ಲಿ ಅವನದೇನು ತಪ್ಪಿಲ್ಲ ಆದರೇ ಅವನನ್ನು ಮುಂದೇ ಮಾಡಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಕೆಲವರು ಮುಂದಾಗಿದ್ದಾರೆ ಎಂದು ಹೆಸರು ಹೇಳದೇ ವಾಗ್ದಾಳಿ ನಡೆಸಿದರು.

ತಾಲೂಕಿನ ನಾಲತವಾಡ ಪಟ್ಟಣ ವ್ಯಾಪ್ತಿಯ ಅಮರೇಶ್ವರ ದೇವಸ್ಥಾನ ಹತ್ತಿರ ಅರ್ಧಕ್ಕೆ ನಿಂತಿರುವ ಚಿಮ್ಮಲಗಿ ಏತನಿರಾವರಿ ಕಾಲುವೆ ಕಾಮಗಾರಿ ವಿಷಯಕ್ಕೆ ಸಂಬಂಧಿಸಿದಂತೆ ಕಳೇದ ನಾಲ್ಕು ವರ್ಷಗಳಿಂದ ಯಾಕೇ ಹೋರಾಟ ಮಾಡಲಿಲ್ಲ ಆಗ ಇರದ ರೈತರ ಮೇಲಿನ ಪ್ರೀತಿ ಈಗ್ಯಾಕೆ ದೀಢಿರನೇ ಬಂತು.!

ಹಿಂದಿನ ಬಿಜೆಪಿ ಸರಕಾರದ ಅವಧಿಯಲ್ಲಿ ವಿಧಾನ ಸಭಾ ಚುನಾವಣೆ ಸಮೀಪಿಸುತ್ತಿದೇ ಎನ್ನುವುದನ್ನು ಖಚಿತಪಡಿಸಿಕೊಂಡು ಜನರ ವಿಶ್ವಾಸ ಗಳಿಸಲು ದೀಢಿರ ಟೆಂಡೆರ್ ಪ್ರಕ್ರೀಯೆ ಪ್ರಾರಂಭಿಸುತ್ತಾರೆ. ಅಷ್ಟರಲ್ಲಿಯೇ ವಿಧಾನ ಸಭಾ ಚುನಾವಣೆ ಘೋಷಣೆಗೊಂಡು ನೀತಿಸಂಹಿತೆ ಬಂದು ಯಾವೂದೇ ಪ್ರಕ್ರಿಯೇ ನಡೆಯದೇ ವಿಳಂಭವಾಗುತ್ತದೆ.

ಮುಂದೆ ರಾಜ್ಯದಲ್ಲಿ ನಮ್ಮ ಸರಕಾರ ರಚನೆಗೊಳ್ಳುತ್ತದೆ ಆಗ ಈ ಹಿಂದಿನ ಸರಕಾರ ಕೈಗೊಂಡಿರುವ ಅವೈಜ್ಞಾನಿಕವಾಗಿ ಕೈಗೊಂಡಿರುವ ಕಾಮಗಾರಿಗಳನ್ನು ಸ್ಥಗಿತಗೊಳಿಸಬೇಕು ಎಂದು ಸರಕಾರ ಆದೇಶ ಹೊರಡಿಸಿದ್ದರಿಂದ ಯಾವೂದೇ ಕ್ರಮ ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಈ ಹಿಂದೆ ಕರೆದ ಟೆಂಡರ್ ನಲ್ಲಿ ಒಬ್ಬನೇ ಗುತ್ತಿಗೆದಾರರು ಬಾಗವಹಿಸಿದ್ದರಿಂದ ನಿಮಯ ಉಲ್ಲಂಘನೆಯಾಗುತ್ತದೆ ಎನ್ನುವ ಕಾರಣ ಸಧ್ಯ ಟೆಂಡೆರ್ ರದ್ದುಗೊಳಿಸಿ ಪುನಃ ಟೆಂಡೆರ ಕರೆದು ತೀವ್ರ ಗತಿಯಲ್ಲಿಯೇ ಸಂಪರ್ಕ ಸೇತುವೆ ಹಾಗೂ ಕಾಲುವೆ ಕಾಮಗಾರಿಯನ್ನು ಪ್ರಾರಂಭಿಸುವ ಮೂಲಕ ರೈತರ ಬೇಡಿಕೆ ಇಡೇರಿಸಲಾಗುವುದು ಸ್ವಲ್ಪ ದಿನದವರೆಗೆ ಕಾಲಾವಕಶ ಬೇಕಷ್ಟೇ ಎಂದರು.

ಈ ಹಿಂದೆ ಎಸ್ ಎಂ ಕೃಷ್ಣಾ ಅವರು ಮುಖ್ಯಮಂತ್ರಿಯಾಗಿದ್ದರು ನಾನು ಶಾಸಕನಾಗಿದ್ದ ಸಂದರ್ಭದಲ್ಲಿ ಮತಕ್ಷೇತ್ರದಲ್ಲಿ ಸಮಗ್ರ ನಿರಾವರಿಗಾಗಿ ಅತಿ ಹೆಚ್ಚು ಅನುದಾನ ತರುವುದರೊಂದಿಗೆ ನಿರಾವರಿಗೊಳಿಸುವ ಮೂಲಕ ರೈತರ ಆಸೆ ಇಡೇರಿಸಲಾಗಿದೆ.ಆದರೇ ಕೆಲವು ತಾಂತ್ರಿಕ ತೊಂದರೆಯಿಂದಾಗಿ ಜೊತೆಗೆ ಭೂಸ್ವಾಧಿನ ಪ್ರಕ್ರೀಯೆಯಲ್ಲಿ ಸಮಸ್ಯೆಗಳಿಂದಾಗಿ ಕೆಲವು ಕಾಮಗಾರಿಗಳನ್ನು ಅರ್ಧಕ್ಕೆ ನಿಲ್ಲಬೇಕಾಯಿತು.

ಸಮಗ್ರ ಉತ್ತರ ಕರ್ನಾಟಕದ ಹಿಂದುಳಿದ ತಾಲೂಕುಗಳನ್ನು ನಿರಾವರಿ, ರಸ್ತೆ ಸೇರಿದಂತೆ ಮೂಲ ಬೂತಸೌಲಭ್ಯಗಳಿಂದ ಅಭಿವೃದ್ಧಿ ಪಡಿಸಬೇಕು ಎನ್ನುವುದು ನನ್ನ ಒತ್ತಾಯವಿದೇ ಹಾಗೊಂದು ವೇಳೆ ಆಗಲಿಲ್ಲವೆಂದರೆ ರಾಜಕೀಯ ತ್ಯಾಗಕ್ಕೂ ನಾನು ಸಿದ್ಧನಿದ್ದೇನೆ ಎಂದರು.

ಆದರೇತಾಲೂಕಿನಲ್ಲಿನ ರೈತರ ಬೇಡಿಕೆಯಂತೆ ಸಂಪೂರ್ಣ ನಿರಾವರಿ ಮತ್ತು ಅಭಿವೃದ್ಧಿಯ ವಿಚಾರದಲ್ಲಿ ಯಾರೇ ಆಗಲಿ ರಾಜಕಾರಣ ಮಾಡುವುದು ಸರಿಯಲ್ಲ. ಅದಕ್ಕಂತೂ ನಾನು ಕೂಡ ಸನ್ನದ್ದರಾಗಿದ್ದೇನೆ ಯಾವಾಗ ಹೇಗೆ ಉತ್ತರ ಕೊಡಬೇಕು ಎಂಬುದು ನನಗೆ ತಿಳಿದಿದೆ. ಸಮಗ್ರ ಉತ್ತರ ಕರ್ನಾಟಕದ ಹಿಂದುಳಿದ ತಾಲೂಕುಗಳನ್ನು ನಿರಾವರಿ, ರಸ್ತೆ ಸೇರಿದಂತೆ ಮೂಲ ಬೂತಸೌಲಭ್ಯಗಳಿಂದ ಅಭಿವೃದ್ಧಿ ಪಡಿಸಬೇಕು ಎನ್ನುವುದು ನನ್ನ ಒತ್ತಾಯವಿದೇ ಹಾಗೊಂದು ವೇಳೆ ಆಗಲಿಲ್ಲವೆಂದರೆ ರಾಜಕೀಯ ತ್ಯಾಗಕ್ಕೂ ನಾನು ಸಿದ್ಧನಿದ್ದೇನೆ ಎಂದರು.

ತಾಳಿಕೋಟಿ ಢೋಣಿ ನದಿಯ ರಸ್ತೆ ಮುಖ್ಯ ಸೇತುವೆ ಸಧ್ಯ ಬಿರುಕುಗೊಂಡು ಅಪಾಯದ ಸ್ಥಿತಿಯಲ್ಲಿರುವುದನ್ನು ಗಮನಿಸಿ ಸೇತುವೆ ನಿರ್ಮಾಣ, ಹಗರಗುಂಡ ಕರೆ ನಿರ್ಮಾಣ ಅಡವಿ ಹುಲಗಬಾಳ ಸಂಪರ್ಕ ರಸ್ತೆ ಸೇತುವೆ ನಿರ್ಮಾಣ ಸೇರಿದಂತೆ ಹಲವು ಅಗತ್ಯ ಅಭಿವೃದ್ಧಿ ಪೂರಕ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಈ ವೇಳೆ ಕೆಬಿಜೆನ್ ಎಲ್ ಇಇ ಆರ್ ಎಲ್ ಹಳ್ಳೂರ, ಎಇಇಸೇವಾಲಾಲ ಚವ್ಹಾಣ, ಅಶೋಕ ಬಿರಾದಾರ, ಶಿವಾಜಿ ಬಿರಾದಾರ, ಅಬುಬಕರ ಬಾಗವಾನ, ಬಸವರಾಜ ಕುಂಟೋಜಿ,ಬಸವಬರಾಜ ದೊಡಮನಿ ಸೇರಿದಂತೆ ಹಲವರು ಇದ್ದರು.

# ಪೊಲೀಸರ ಪ್ರಶ್ನೆಗಳಿಗೆ ಕುಗ್ಗಿಹೋದ "ಜಗ್ಗು ದಾದಾ"

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದ ಪ್ರಮುಖ ಆರೋಪಿ ನಟ ದರ್ಶನ್ ಪೊಲೀಸರ ತೀವ್ರ ವಿಚಾರಣೆಯಿಂದ ಬಳಲಿ ಬೆಂಡಾಗಿದ್ದಾರೆ.ವಿಜಯನಗರ ಉಪ–ವಿಭಾಗದ ಪೊಲೀಸರು ಮೈಸೂರಿನ ಹೋಟೆಲ್‌ಗೆ ಹೋಗಿ ದರ್ಶನ್‌ನನ್ನು ವಶಕ್ಕೆ ತೆಗೆದುಕೊಂಡು ಬೆಂಗಳೂರಿಗೆ ಕರೆ ತಂದು ತೀವ್ರ ವಿಚಾರಣೆಗೆ ಒಳಪಡಿಸಿ ನಂತರ ಬಂಧಿಸಿದ್ದಾರೆ.

ತದನಂತರ ದರ್ಶನ್ ಸೇರಿದಂತೆ ಉಳಿದ ಆರೋಪಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದಾಗ ನ್ಯಾಯಾಲಯ 6 ದಿನಗಳ ಕಾಲ ಪೊಲೀಸ್ ವಶಕ್ಕೆ ನೀಡಿದ್ದು, ಅನ್ನಪೂರ್ಣೇಶ್ವರಿ ನಗರ ಠಾಣೆಯಲ್ಲಿ ತೀವ್ರ ವಿಚಾರಣೆಗೆ ಒಳಪಡಿಸಲಾಗಿದೆ.

ಮೊದಲ ದಿನ ಇದ್ದ ಗತ್ತು ಇದೀಗ ಅವರಲ್ಲಿ ಉಳಿದುಕೊಂಡಿಲ್ಲ. ಪೊಲೀಸರ ನಿರಂತರ ವಿಚಾರಣೆಯಿಂದ ಸೊರಗಿ ಸುಣ್ಣವಾಗಿದ್ದಾರೆ.

ರೇಣುಕಾ ಸ್ವಾಮಿ ಕೊಲೆ ಬಗ್ಗೆ ಪೊಲೀಸರು ಪ್ರಶ್ನೆಗಳನ್ನು ಕೇಳಿದಾಗ ನನಗೇನು ಗೊತ್ತಿಲ್ಲವೆಂದೇ ಹೇಳುತ್ತಿದ್ದಾರೆ. ಹಾಗಾಗಿ ಉಳಿದ ಆರೋಪಿಗಳ ಹೇಳಿಕೆಗಳನ್ನು ಆಧರಿಸಿ ದರ್ಶನ್‌ನನ್ನು ವಿಚಾರಣೆ ಮಾಡಲಾಗುತ್ತಿದೆ. ರೇಣುಕಾ ಸ್ವಾಮಿ ಕೊಲೆ ನಡೆದ ಪಟ್ಟಣಗೆರೆ ಶೆಡ್‌ಗೆ ಸ್ಥಳ ಮಹಜರಿಗಾಗಿ ದರ್ಶನ್‌ನನ್ನು ಕರೆದೊಯ್ದಾಗಲೂ ಸಹ ಪೊಲೀಸರ ಪ್ರಶ್ನೆಗೆ ಯಾವುದೇ ಉತ್ತರ ನೀಡದೇ ಮೌನಕ್ಕೆ ಶರಣಾಗಿದ್ದಾರೆ.

ಈ ಘಟನೆ ಬಗ್ಗೆ ನನಗೇನು ಗೊತ್ತಿಲ್ಲ ಎಂದಷ್ಟೇ ಹೇಳುತ್ತಿದ್ದಾರೆ. ಈ ನಡುವೆ ಅವರಿಗೆ ತಮ ನಟನೆಯ ಭವಿಷ್ಯದ ಬಗ್ಗೆ ತೀವ್ರ ಚಿಂತೆ ಕಾಡಿದೆ. ಈ ಪ್ರಕರಣದಲ್ಲಿ ಸಿಲುಕಿಕೊಂಡಿರುವ ದರ್ಶನ್ ರಾತ್ರಿ ಸರಿಯಾಗಿ ನಿದ್ದೆ ಮಾಡುತ್ತಿಲ್ಲ. ನಿದ್ದೆಯಿಂದ 2–3 ಬಾರಿ ಎಚ್ಚರಗೊಳ್ಳುತ್ತಿದ್ದಾರೆ. ನನ್ನ ನಟನೆ ಭವಿಷ್ಯದ ಬಗ್ಗೆ ಮರುಗುತ್ತಿದ್ದಾರೆ. ಒಟ್ಟಾರೆ ಈ ಪ್ರಕರಣದಿಂದ ದರ್ಶನ್ ಕುಗ್ಗಿ ಹೋಗಿರುವುದಂತೂ ಸತ್ಯ. ಯಾರೇ ಆಗಲಿ ಕಾನೂನನ್ನು ಕೈಗೆತ್ತಿಕೊಂಡರೆ ಒಂದಲ್ಲಾ ಒಂದು ದಿನ ಕಷ್ಟ ಅನುಭವಿಸಲೇಬೇಕಾಗುತ್ತದೆ ಎಂಬ ಮಾತು ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿದೆ.

# ನೆಕ್ಸಾನ್ ಇವಿ ಕೂಡ ಭಾರತ್-ಎನ್‌ಸಿಎಪಿಯಿಂದ 5-ಸ್ಟಾರ್ ರೇಟಿಂಗ್ ಪಡೆದಿದೆ

ಪುಟ 1ರಿಂದ

ವಯಸ್ಕರ ರಕ್ಷಣೆ ವಿಭಾಗದಲ್ಲಿ ದಾಖಲೆಯ 31.46/32 ಅಂಕಗಳು, ಚಿಲ್ಡ್ರನ್ ಆಕ್ಯುಪೆಂಟ್ ಪ್ರೊಟೆಕ್ಷನ್ (ಸಿಓಪಿ) ಅಂದ್ರೆ ಮಕ್ಕಳ ರಕ್ಷಣೆ ವಿಭಾಗದಲ್ಲಿ 45/49 ಅಂಕಗಳನ್ನು ಪಡೆದುಕೊಂಡಿದೆ. ನೆಕ್ಸಾನ್.ಇವಿ ಎಓಪಿ ಮತ್ತು ಸಿಓಪಿಯಲ್ಲಿ ಕ್ರಮವಾಗಿ 29.86/32 ಮತ್ತು 44.95/49 ಅಂಕಗಳನ್ನು ಗಳಿಸಿದೆ. ಈ ಮೂಲಕ ಟಾಟಾ ಮೋಟಾರ್ಸ್ ಈಗ ಭಾರತ್–ಎನ್‌ಸಿಎಪಿ ಮತ್ತು ಗ್ಲೋಬಲ್–ಎನ್‌ಸಿಎಪಿ ಪರೀಕ್ಷೆಗಳಲ್ಲಿ 5–ಸ್ಟಾರ್‌ಗಳನ್ನು ಗಳಿಸಿರುವ ಅತಿ ಸುರಕ್ಷಿತ ಶ್ರೇಣಿಯ ಎಸ್‌ಯುವಿ ಉತ್ಪನ್ನ ಶ್ರೇಣಿಗಳನ್ನು ಹೊಂದಿರುವ ಏಕೈಕ ಒಇಎಂ ಆಗಿದೆ.

ಭಾರತದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಗೌರವಾನ್ವಿತ ಸಚಿವರಾದ ಶ್ರೀ. ನಿತಿನ್ ಗಡ್ಕರಿ, "ನೆಕ್ಸಾನ್.ಇವಿ ಮತ್ತು ಪಂಚ್.ಇವಿ ಭಾರತ್–ಎನ್‌ಸಿಎಪಿಯಲ್ಲಿ 5–ಸ್ಟಾರ್ ರೇಟಿಂಗ್ ಅನ್ನು ಪಡೆದಿದೆ. ಈ ಮಹತ್ವದ ಸಾಧನೆ ಮಾಡಿದ್ದಕ್ಕಾಗಿ ನಾನು ಟಾಟಾ ಮೋಟಾರ್ಸ್‌ಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ದೇಶದಲ್ಲಿ ಸುರಕ್ಷಿತ ವಾಹನಗಳು ಇರಬೇಕು ಎನ್ನುವ ಭಾರತ ಸರ್ಕಾರದ ದೃಷ್ಟಿಗೆ ಈ ಪ್ರಮಾಣೀಕರಣವು ಸೂಕ್ತವಾಗಿ ಹೊಂದಿಕೆಯಾಗುತ್ತದೆ ಮತ್ತು ಭಾರತದ ಆಟೋಮೊಬೈಲ್ ಉದ್ಯಮವನ್ನು 'ಆತ್ಮನಿರ್ಭರ' ಮಾಡುವಲ್ಲಿ ಭಾರತ್–ಎನ್‌ಸಿಎಪಿಯ ಪಾತ್ರವನ್ನು ಒತ್ತಿಹೇಳುತ್ತದೆ. ಭಾರತ್–ಎನ್‌ಸಿಎಪಿ ಕಾರು ಸುರಕ್ಷತಾ ಮಾನದಂಡವು ಭಾರತವನ್ನು ಜಾಗತಿಕ ಆಟೋಮೊಬೈಲ್ ಹಬ್ ಮಾಡಲು ಮತ್ತು ಅಂತರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಅವುಗಳ ರಫ್ತು ಯೋಗ್ಯತೆಯನ್ನು ಹೆಚ್ಚಿಸುವ ಸರ್ಕಾರದ ದೃಷ್ಟಿಯನ್ನು ಅರಿತುಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ" ಎಂದು ಹೇಳಿದರು.

ಈ ಅಪೂರ್ವ ಸಾಧನೆಯ ಬಗ್ಗೆ ಮಾತನಾಡಿದ ಟಾಟಾ ಪ್ಯಾಸೆಂಜರ್ ಎಲೆಕ್ಟ್ರಿಕ್ ಮೊಬಿಲಿಟಿ ಮತ್ತು ಟಾಟಾ ಮೋಟಾರ್ಸ್ ಪ್ಯಾಸೆಂಜರ್ ವೆಹಿಕಲ್ಸ್ ಎಂಡಿ ಶ್ರೀ ಶೈಲೇಶ್ ಚಂದ್ರ, "ಮೊದಲು ಬಹಳ ಕಡಿಮೆ ಚರ್ಚೆ ಆಗುತ್ತಿದ್ದ ಸುರಕ್ಷತೆ ವಿಚಾರ ಈಗ ಭಾರತೀಯ ಕಾರು ಖರೀದಿದಾರರ ಪ್ರಮುಖ ಆದ್ಯತೆಯಾಗಿದೆ. ಸುರಕ್ಷತೆ ಎಂಬುದು ಟಾಟಾ ಮೋಟಾರ್ಸ್‌ನ ನಮ್ಮ ಡಿಎನ್‌ಎಯಲ್ಲಿಯೇ ಇದೆ. ಅದರಿಂದಲೇ ನಾವು ಉದ್ಯಮದಲ್ಲಿ ಮಾನದಂಡ ಸ್ಥಾಪಿಸುವಂತಾಗಿದೆ. ಸುರಕ್ಷತಾ ಮಾನದಂಡವನ್ನು ಸ್ಥಾಪಿಸುವ ನಿಟ್ಟಿನಲ್ಲಿ ನಾವು ಪ್ರವರ್ತಕರಾಗಿ ಮುಂದುವರೆದಿದ್ದೇವೆ. ಬೆಲೆಯನ್ನು ಲೆಕ್ಕಿಸದೆ ನಾವು ತಯಾರಿಸುವ ಪ್ರತಿಯೊಂದು ವಾಹನವೂ ಸುರಕ್ಷಿತವಾಗಿರಬೇಕು ಎಂಬುದರ ಕುರಿತು ನಾವು ಬದ್ಧವಾಗಿದ್ದೇವೆ.

ನಾವು ಕಟ್ಟುನಿಟ್ಟಾದ ಸರ್ಕಾರಿ ಸುರಕ್ಷತಾ ಮಾನದಂಡಗಳನ್ನು ಒಪ್ಪಿಕೊಳ್ಳುತ್ತೇವೆ ಮತ್ತು ಅತ್ಯುತ್ತಮ ಫಲಿತಾಂಶಗಳನ್ನು ಪಡೆದು ಭಾರತ್–ಎನ್‌ಸಿಎಪಿ ಪ್ರೋಟೋಕಾಲ್ ಅನ್ನು ಪಾಲಿಸಿದ ಹಾಗೂ ಅಲ್ಲಿಗೆ ವಾಹನವನ್ನು ಕಳುಹಿಸಿದ ಮೊದಲ ವಾಹನ ತಯಾರಕರು ಎಂದು ಹೆಮ್ಮೆಪಡುತ್ತೇವೆ.

ಪಂಚ್.ಇವಿ ಭಾರತದಲ್ಲಿ ಉತ್ಪಾದಿಸಲ್ಪಡುವ ಸುರಕ್ಷಿತ ಇವಿ ವಾಹನ ಎಂದು ಹೇಳಿಕೊಳ್ಳಲು ನಾವು ಸಂತೋಷಪಡುತ್ತೇವೆ. ಜೊತೆಗೆ ನೆಕ್ಸಾನ್.ಇವಿ 5–ಸ್ಟಾರ್ ರೇಟಿಂಗ್ ಪಡೆಯುವುದರ ಮೂಲಕ ಸುರಕ್ಷತೆಯ ಪರಂಪರೆಯನ್ನು ಮುಂದುವರೆಸಿದೆ. ಒಟ್ಟಾಗಿ, ಭಾರತ್–ಎನ್‌ಸಿಎಪಿ ಅಡಿಯಲ್ಲಿ ಪರೀಕ್ಷೆಗೆ ಒಳಗಾದ ನಮ್ಮ ಎಲ್ಲಾ ನಾಲ್ಕು ಎಸ್‌ಯುವಿಗಳು 5–ಸ್ಟಾರ್ ರೇಟಿಂಗ್‌ಗಳನ್ನು ಪಡೆದಿವೆ. ಈ ಮೂಲಕ ಎಲ್ಲಾ ಪ್ರಯಾಣಿಕ ವಾಹನಗಳು ಅನುಸರಿಸಬಹುದಾದ ಮಾನದಂಡವನ್ನು ಸ್ಥಾಪಿಸಿವೆ. ಸುರಕ್ಷತೆಯ ಕುರಿತಾದ ನಮ್ಮ ಗಟ್ಟಿ ನಿಲುವು ಮುಂದುವರಿಯುತ್ತದೆ. ಅದಕ್ಕೆ ಬೇಕಾದ ಉತ್ತಮ ಆರ್ & ಡಿ ಬೆಂಬಲವು ನಮಗೆ ಈ ನಿಟ್ಟಿನಲ್ಲಿ ಬೆಳೆಯಲು ಹಾಗೂ ಪ್ರತಿ ಪ್ರಯಾಣಿಕರಿಗೆ ಸುರಕ್ಷಿತ ಭವಿಷ್ಯವನ್ನು ರಚಿಸಲು ದಾರಿ ಮಾಡಿಕೊಡಲು ನಮಗೆ ಸಹಾಯ ಮಾಡುತ್ತದೆ" ಎಂದು ಹೇಳಿದರು.

ಪಂಚ್.ಇವಿ ಪ್ರಾರಂಭವಾದಾಗಿನಿಂದಲೂ ಇವಿ ಆಸಕ್ತರಿಗೆ ಮತ್ತು ಮೊದಲ ಬಾರಿಯ ಖರೀದಿದಾರರಲ್ಲಿ ಆಕರ್ಷಣೆ ಉಂಟು ಮಾಡಿದೆ. ಗ್ರಾಮೀಣ ಮಾರುಕಟ್ಟೆಗಳಲ್ಲಿ 35%ಕ್ಕಿಂತ ಹೆಚ್ಚು ಇವಿ ಮಾಲೀಕರು ಇದ್ದಾರೆ. ದೀರ್ಘ ರೇಂಜ್, ಉತ್ಕೃಷ್ಟ ಕಾರ್ಯಕ್ಷಮತೆ, ಅತ್ಯಾಧುನಿಕ ತಂತ್ರಜ್ಞಾನ ಮತ್ತು ಪ್ರತೀ ವಿಭಾಗಗಳಲ್ಲಿ ಸಿಗುವ 2 – 3 ವಿಭಿನ್ನ ವೈಶಿಷ್ಟ್ಯಗಳನ್ನು ಹೊಂದಿರುವ ಪಂಚ್.ಇವಿ ತನ್ನ ಕುಟುಂಬದಲ್ಲಿ 10,000 ಕ್ಕೂ ಹೆಚ್ಚು ಹೆಮ್ಮೆಯ ಸದಸ್ಯರನ್ನು ಹೊಂದಿದೆ. ಇದು ನಿಜವಾದ ವಿದ್ಯುತ್ ಎಸ್ ಯು ವಿ ಮಾತ್ರವಲ್ಲ, ಇದು ಚಲನಶೀಲತೆಯ ಭವಿಷ್ಯಕ್ಕೆ ಒಂದು ಮಹತ್ವದ ಹೆಜ್ಜೆಯಾಗಿದೆ.

ಪಂಚ್.ಇವಿ ಅನುಕೂಲ ವಿಚಾರದಲ್ಲಿಯೂ ಹೆಚ್ಚು ಅಂಕ ಗಳಿಸುತ್ತದೆ ಮತ್ತು ಗ್ರಾಹಕರಿಗೆ ಸುಭವಾಗಿ ಪ್ರೀಮಿಯಂ ಅನುಭವವನ್ನು ನೀಡುತ್ತದೆ.

ಪಂಚ್.ಇವಿ ನಿರೀಕ್ಷೆಗೂ ಮೀರಿದ ಸುರಕ್ಷತೆ 6 ಏರ್ ಬ್ಯಾಗ್‌ಗಳು (ಸ್ಟಾಂಡರ್ಡ್) 360 ಡಿಗ್ರಿ ಎಸ್‌ವಿಎಸ್ ಎಲೆಕ್ಟ್ರಿಕ್ ಸ್ಟೆಬಿಲಿಟಿ ಪ್ರೋಗ್ರಾಮ್ (ಸ್ಟಾಂಡರ್ಡ್) ಬ್ಲೈಂಡ್ ಸ್ಪಾಟ್ ಮಾನಿಟರಿಂಗ್ ಐಸೋಫಿಕ್ಸ್ (ಸ್ಟಾಂಡರ್ಡ್)ಎಸ್‌ಓಎಸ್ ಕಾಲಿಂಗ್

ಹಿಲ್ ಹೋಲ್ಡ್ ಅಸಿಸ್ಟ್ (ಸ್ಟಾಂಡರ್ಡ್) ಆಟೋ ಹೋಲ್ಡ್ ಜೊತೆಗೆ ಎಲೆಕ್ಟ್ರಾನಿಕ್ ಪಾರ್ಕಿಂಗ್ ಬ್ರೇಕ್ ರೋಲ್ ಓವರ್ ಮಿಟಿಗೇಷನ್ (ಸ್ಟಾಂಡರ್ಡ್) ಎಲ್ಲಾ 4 ಡಿಸ್ಕ್ ಬ್ರೇಕ್ ಗಳು ಐಟಿಪಿಎಂಎಸ್ (ಸ್ಟಾಂಡರ್ಡ್)ಹಿಲ್ ಡಿಸೆಂಟ್ ಕಂಟ್ರೋಲ್

ಭಾರತದ ಇವಿ ಕ್ರಾಂತಿಯ ಕಿಕ್‌ಸ್ಟಾರ್ಟರ್ ಎಂದು ಮನ್ನಣೆ ಪಡೆದಿರುವ ನೆಕ್ಸಾನ್.ಇವಿ 2020ರಲ್ಲಿ ಪ್ರಾರಂಭವಾದಾಗಿನಿಂದ 68,000 ಯೂನಿಟ್‌ಗಳನ್ನು ಮಾರಾಟ ಮಾಡಿದೆ. 2023ರಲ್ಲಿ ಅನಾವರಣಗೊಂಡ ಎಸ್ ಯು ವಿಯ ನವೀಕರಿಸಿದ ಗೇಮ್‌ಚೇಂಜಿಂಗ್ ಹೊಸ ಅವತಾರವು ಇಡೀ ಭಾರತೀಯ ವಾಹನ ಉದ್ಯಮದ ಪ್ರಗತಿಗೆ ಗಮನಾರ್ಹ ಕೊಡುಗೆ ನೀಡುತ್ತದೆ. ಇದರ ಆಕರ್ಷಕ ಡಿಜಿಟಲ್–ಫಸ್ಟ್ ವಿನ್ಯಾಸ, ತಂತ್ರಜ್ಞಾನ– ಚಾಲಿತ ಚಾಲನಾ ಅನುಭವ ಮತ್ತು ಅದ್ಭುತ ಆವಿಷ್ಕಾರಗಳು ಇದನ್ನು ಚಕ್ರಗಳಿರುವ ಗ್ಯಾಜೆಟ್ ಎಂದು ಕರೆಯುವಂತೆ ಮಾಡಿದೆ ಮತ್ತು ಈ ಕಾರು ಭಾರತೀಯ ಇವಿ ಉದ್ಯಮದಲ್ಲಿ ಹೊಸ ಮಾನದಂಡಗಳನ್ನು ಸ್ಥಾಪಿಸಿದೆ.

ನೆಕ್ಸಾನ್.ಇವಿ : ಗೇಮ್ ಚೇಂಜಿಂಗ್ ಸುರಕ್ಷತೆ 6 ಏರ್ ಬ್ಯಾಗ್ ಗಳು (ಸ್ಟಾಂಡರ್ಡ್) 360 ಡಿಗ್ರಿ ಎಸ್ ವಿ ಎಸ್ ಐವಿಬಿಎಸಿ ಜೊತೆಗೆ ಎಲೆಕ್ಟ್ರಿಕ್ ಸ್ಟೆಬಿಲಿಟಿ ಪ್ರೋಗ್ರಾಮ್ (ಸ್ಟಾಂಡರ್ಡ್) ಬ್ಲೈಂಡ್ ಸ್ಪಾಟ್ ಮಾನಿಟರಿಂಗ್ ಐಸೋಫಿಕ್ಸ್ (ಸ್ಟಾಂಡರ್ಡ್) ಎಸ್‌ಓಎಸ್ ಕಾಲಿಂಗ್ ಹಿಲ್ ಹೋಲ್ಡ್ ಅಸಿಸ್ಟ್ (ಸ್ಟಾಂಡರ್ಡ್) ಆಟೋ ಹೋಲ್ಡ್ ಜೊತೆಗೆ ಎಲೆಕ್ಟ್ರಾನಿಕ್ ಪಾರ್ಕಿಂಗ್ ಬ್ರೇಕ್ ರೋಲ್ ಓವರ್ ಮಿಟಿಗೇಷನ್ (ಸ್ಟಾಂಡರ್ಡ್) ಫ್ರಂಟ್ ಪಾರ್ಕಿಂಗ್ ಸೆನ್ಸರ್ ಐಟಿಪಿಎಂಎಸ್ (ಸ್ಟಾಂಡರ್ಡ್) ಎಲ್ಲಾ 4 ಡಿಸ್ಕ್ ಬ್ರೇಕ್ ಗಳು ಕ್ಯಾಮೆರಾ ಮತ್ತು ಸೆನ್ಸರ್ ಜೊತೆಗೆ ರೇರ್ ಪಾರ್ಕಿಂಗ್ ಅಸಿಸ್ಟ್ (ಸ್ಟಾಂಡರ್ಡ್) ಹಿಲ್ ಡಿಸೆಂಟ್ ಕಂಟ್ರೋಲ್

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ-ಪೇಪರ್: www.munjanevarth.com
ಶನಿವಾರ 15 ಜೂನ್ 2024
Saturday 15 June 2024

# ಮೂಗೂರು ಗ್ರಾಮ ಪಂಚಾಯತಿಯ ಉಪಾಧ್ಯಕ್ಷರಾಗಿ ಬಿಜೆಪಿ ಜೆಡಿಎಸ್ ಮೈತ್ರಿ ಅಭ್ಯರ್ಥಿ ಎಂ.ಶಾಂತಿರಾಜು ಅವಿರೋಧವಾಗಿ ಆಯ್ಕೆ



ತಿ.ನರಸೀಪುರ. ಮೂಗೂರು ಗ್ರಾಮ ಪಂಚಾಯತಿಯ ಉಪಾಧ್ಯಕ್ಷರಾಗಿ ಬಿಜೆಪಿ ಜೆಡಿಎಸ್ ಮೈತ್ರಿ ಅಭ್ಯರ್ಥಿ ಎಂ.ಶಾಂತಿರಾಜು ಅವಿರೋಧವಾಗಿ ಆಯ್ಕೆಯಾದರು.

ಮೂಗೂರು ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಲಕ್ಷ್ಮಿ ರವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಹಿನ್ನೆಲೆಯಲ್ಲಿ ತೆರವಾದ ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಎಂ. ಶಾಂತಿ ರಾಜು ರವರನ್ನು ಹೊರತುಪಡಿಸಿ ಬೇರೆ ಸದಸ್ಯರಾರು ಉಮೇದುವಾರಿಕೆ ಸಲ್ಲಿಸಿದ ಕಾರಣ ಎಂ ಶಾಂತಿ ರಾಜು ರವರು ಉಪಾಧ್ಯಕ್ಷರಾಗಿ ಅವಿರೋಧ ಆಯ್ಕೆಯಾದರು.

ಮೂಗೂರು ಗ್ರಾಮ ಪಂಚಾಯತಿ

ಒಟ್ಟು 25 ಜನ ಸದಸ್ಯರ ಸಂಖ್ಯಾ ಬಲಹೊಂದಿದ್ದು ಈ ಪೈಕಿ 16 ಮಂದಿ ಹಾಜರಿದ್ದು ಉಪಾಧ್ಯಕ್ಷರ ಆಯ್ಕೆಗೆ ಬೆಂಬಲ ವ್ಯಕ್ತಪಡಿಸಿದರು. ಚುನಾವಣಾ ಅಧಿಕಾರಿಯಾಗಿ ಬನ್ನೂರು ನೀರಾವರಿ ಇಲಾಖೆ ಎ ಇ ಇ ರತೀಶ್ ಸಹಾಯಕರಾಗಿ ಜಿ.ಪಂ.ನಾಗರಾಜು ಕಾರ್ಯ ನಿರ್ವಹಿಸಿದ್ದರು.

ನೂತನ ಉಪಾಧ್ಯಕ್ಷ ಎಂ.ಶಾಂತಿ ರಾಜು ಮಾತನಾಡಿ ಪಂಚಾಯತಿ ಅಭಿವೃದ್ಧಿ ಕಾರ್ಯಗಳು ಸೇರಿದಂತೆ ಜನ ಸಾಮಾನ್ಯರ ಕೆಲಸಗಳು ತ್ವರಿತವಾಗಿ ಸಾಗಲು ಅಧ್ಯಕ್ಷರ ಜೊತೆ ಕೈಜೋಡಿಸುತ್ತೇನೆ ಜೊತೆಗೆ ಕುಡಿಯುವ ನೀರು,ಬೀದಿ ದೀಪ ಮತ್ತು ಸ್ವಚ್ಚತೆ ವಿಚಾರದಲ್ಲಿ ಸಾರ್ವಜನಿಕರಿಂದ ದೂರು ಬರದಂತೆ ನೋಡಿಕೊಳ್ಳಲು ಸಂಕಲ್ಪ ಮಾಡಿದ್ದೇನೆ ಎಂದರು.

ಈ ಸಂದರ್ಭದಲ್ಲಿ ಗ್ರಾಂ. ಪಂ ಅಧ್ಯಕ್ಷ ಶಿವಣ್ಣ, ಸದಸ್ಯರುಗಳಾದ ಚಂದ್ರಮ್ಮ, ಎಂ ಪುಟ್ಟ ಮಾದಯ್ಯ,ಭಾಗ್ಯ, ಎಂಎಸ್ ಗೌರೀಶ್, ರತ್ನಮ್ಮ, ಟಿಎಂ ಚೇತನ್,ಆಶಾ, ಎಂ.ಡಿ. ಲೋಕೇಶ್, ನಾಗಮ್ಮ, ಸವಿತಾ,ತಂಗಮ್ಮ ಮಾಜಿ ತಾ. ಪಂ. ಸದಸ್ಯ ಎಂ ಚಂದ್ರಶೇಖರ್, ಎಂ.ಕೆ.ಸಿದ್ದರಾಜು ಮರಿಸ್ವಾಮಿ, ಮಾಜಿ ಪಿ.ಎ. ಸಿ.ಸಿ.ಬಿ. ಅಧ್ಯಕ್ಷ ಸಿದ್ದರಾಜು, ಶಾಂತನಾಗರಾಜು, ರೇವಣ್ಣ, ರಾಜು, ಪಿಡಿಓ ಎಸ್ ಪ್ರಕಾಶ್ ಸೇರಿದಂತೆ ಮತ್ತಿತರರು ಹಾಜರಿದ್ದರು.

# ಅಂತರಂಗ ಪ್ರಕಾಶನ ಸಾಗರ ಇವರ ಪ್ರಕಾಶನದಲ್ಲಿ ಎರಡು ಪುಸ್ತಕಗಳನ್ನು ಬಿಡುಗಡೆ



ಪ್ರಾಸ್ತಾವಿಕ ಮಾತನಾಡಿದ ಅರಾ ಶ್ರೀನಿವಾಸ್, ಪತ್ರಿಕಾ ಬರಹ ಗಂಭೀರ ಸಾಹಿತ್ಯ ವಲ್ಲ. ಸಾಹಿತ್ಯ ಪರಿಷತ್ತು ಹೊಸ ಓದುಗರನ್ನು ತಯಾರಿಸುವಲ್ಲಿ ಎಡವುತ್ತಿದೆ. ಸಾಹಿತ್ಯದ ಕೆಲಸ ವ್ಯವಹಾರ ಎಂದು ಸರ್ಕಾರ ಅಂದುಕೊಂಡಿದೆ. ಇಂಥ ಸಂಸ್ಥೆಯಲ್ಲಿರುವವರು ದಪ್ಪ ಚರ್ಮ ದವರಾಗಿದ್ದಾರೆ. ಸಾಹಿತ್ಯ ಪರಿಷತ್ತಿನ ಕೆಲಸ ಏನೆಂಬುದೇ ಮರೆತಿದ್ದಾರೆ ಎಂದರು. ಗುಚ್ಛ, ಆರು ಲಘು ನಾಟಕಗಳು ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ರಂಗಕರ್ಮಿ ಪ್ರತಿಭಾ ರಾಘವೇಂದ್ರ, ಜನರು ಪುಸ್ತಕ ಕೊಂಡು ಓದುವ ಮನಸ್ಥಿತಿ ಬೆಳೆಸಿಕೊಳ್ಳಬೇಕು. ಈಗಲೂ ಪುಸ್ತಕ ಓದಿದ್ದು ಯಾವುದು ಎಂದು ಪ್ರಶ್ನಿಸುವ ಸ್ನೇಹಿತರು ಈಗಲೂ ಇದ್ದಾರೆ. ಆದರೆ ರಿಲ್ಸ್, ಸಿನಿಮಾ ಮಾಡಿದ್ದು ಯಾವುದು ಎಂದು ಕೇಳುವ ಕಾಲವಿದು.ಆದರೆ ಇತರಹದ ಕೃತಿಕಾರರು ನಮ್ಮೊರಿನಲ್ಲಿ ಇರುವುದು ನಮ್ಮ ಹೆಮ್ಮೆ. ಪತ್ರಕರ್ತ ತನ್ನೊಳಗಿನ ಸಾಹಿತಿಯನ್ನು ಕಾಪಾಡಿಕೊಳ್ಳುವುದು ಕಷ್ಟ. ಅವರ ದೈನಂದಿನ ಸುದ್ದಿ ಸಂಬಂಧಿತ ಕಾರ್ಯದಲ್ಲಿ ತೊಡಗಿಕೊಂಡು ಒತ್ತಡದಲ್ಲೇ ಬದುಕುತ್ತಾರೆ. ಕತೆ ಕಾದಂಬರಿ ಲೇಖಕ ಸಮಾಜದ ಪ್ರತಿಧ್ವನಿ. ತುರ್ತು ಸಂದರ್ಭದಲ್ಲಿ ಸಾಹಿತಿಗಳು ನೇರ ನಿಷ್ಠುರತೆ ಹೊಂದಬೇಕಾದಲ್ಲಿ ಮೌನ ವಹಿಸುವ ಪದ್ಧತಿ ಹೆಚ್ಚಿದೆ. ನಮ್ಮ ಮುಂದಿನ ತಲೆಮಾರಿಗೆ ಜವಾಬ್ದಾರಿಯನ್ನು ಕೊಡಬೇಕಾದ್ದು ನಮ್ಮ ಕರ್ತವ್ಯ.ಎಂದು ಲೇಖರನ್ನು ಉತ್ತೇಜಿಸುವ ಕೆಲಸ ಆಗಬೇಕಿದೆ ಎಂದರು. ಆರು ಲಘು ನಾಟಕ ಕುರಿತು ಜಯಪ್ರಕಾಶ್ ಮಾವಿನಕುಳಿ ಮಾತನಾಡಿ, ನಾಟಕ ಪತ್ರಿಕೋದ್ಯಮ ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಇಂಗ್ಲೀಷ್ ಭಾಷೆ ಸ್ಕಿಟ್ ಮಾದರಿ ಇದಾಗಿದೆ. ಚಿಕ್ಕ ವಸ್ತು, ಸನ್ನಿವೇಶ, ಒಳಗೊಂಡಿದೆ.

ಧ್ವಜಾರೋಹಣ ನಾಟಕವು 75ರ ತುರ್ತು ಪರಿಸ್ಥಿತಿ ಕುರಿತು ಲೇಖಕರ ಒಳಗಿನ ಸರ್ವಾಧಿಕಾರಿ ಪತನ ಕಲಾತ್ಮಕ ತೋರಿಸಿಕೊಟ್ಟಿದ್ದಾರೆ. ಸೃಜನಶೀಲ ಲೇಖಕ ಧನಾತ್ಮಕ ಚಿಂತನೆ ಬೆಳೆಸುವ ಅಂಶ ವನ್ನೂ ತಮ್ಮ ಕೃತಿಯಲ್ಲಿ ತೋರಿಸುವುದರಿಂದ ಆಗಿದೆ. ರಾಜಕೀಯ ಮಾತ್ರವಲ್ಲ, ಸಾಂಸ್ಕೃತಿಕ ಕ್ಷೇತ್ರವು ಕುಲಗೆಟ್ಟು ಹೋಗಿದೆ. ಇಂಥ ಪ್ರೇಕ್ಷಕರೇ ಪಾತ್ರಧಾರಿ ಯಾಗಿ ತೋರಿಸುವುದು ನಾಟಕದ ಕುತೂಹಲ ಕಾರಿ ವಿಷಯವಾಗಿದೆ ಎಂದರು.ರಂಗಭೂಮಿಯನು ,ಒಂದಷ್ಟು ಸಹೃದಿಯ ಓದುಗರನ್ನು, ಮಾತು ಕೇಳುವವರನ್ನು ಕಳೆದುಕೊಳ್ಳುತ್ತಿದ್ದೇವೆ. ಎಡ ಬಲ ದಾಟೆಗೆ ಅವರ ಮಾತು ಕೇಳುವ ವ್ಯವಧಾನ ಬೆಳೆಸಿಕೊಳ್ಳಬೇಕು.

ತಾಲೂಕು ಮಟ್ಟದಲ್ಲಿ ಸಾಹಿತ್ಯ ವೃದ್ಧಿಗೆ ಸಾಕಷ್ಟು ಅವಕಾಶ ವಿದ್ದು,ಯಾರೇ ಬಂದರೂ, ಅವರ ಮಾತು ಕೇಳುವ ಸಹೃದಿಯರನ್ನು ಕಟ್ಟಿಕೊಳ್ಳಬೇಕಾದ ಅಗತ್ಯವಿದೆ.ಈ ನಿಟ್ಟಿನಲ್ಲಿ ನಾವೆಲ್ಲಾ ಮಗ್ನರಾಗಬೇಕು ಎಂದರು. ಗುಚ್ಛ ಪುಸ್ತಕದ ಬಗ್ಗೆ ಮಾತನಾಡಿದ ಜಯಪ್ರಕಾಶ್ ತಲವಾಟ ಬೇರೆ ಬೇರೆ ಕಾಲದಲ್ಲಿ ಬರೆದ 30 ಲೇಖನ ಒಳಗೊಂಡ ಡಿದೆ. ಗದ್ಯ ಬರಹ ಸಂಗ್ರಹಗಳ ಕೃತಿ ನಮ್ಮ ನಡುವೆ ಇದ್ದು ಎಂದಿಗೂ ಪ್ರಸ್ತುತ ಎನ್ನಿಸುವ ಲೇಖನವಿದು ಎಂದು ಗುಚ್ಛ ಪುಸ್ತಕ ಬಗ್ಗೆ ಮಾತಾಡಿದರು. ಅಧ್ಯಕ್ಷತೆ ವಹಿಸಿದ್ದ ಆ.ರಾ. ಲಂಬೋದರ ಹೆಸರಿನಲ್ಲಿ ಲಘು ವಿದ್ದರೂ ಕೃತಿಯಲ್ಲಿ ಹಾಗಿಲ್ಲ. ಸಾಗರದಲ್ಲಿ ಮೊದಲು ನಾಟಕ ಪ್ರದರ್ಶನ ಸಂಸ್ಕೃತಿ ಇತ್ತು. ಈಗ ಅದು ಸಂಪೂರ್ಣ ನಶಿಸಿ ಹೋಗಿದೆ. ನಾವು ಮುಳುಗಡೆ ಪ್ರದೇಶದಿಂದ ಬಂದವರು. ಅದರ ತಲ್ಲಣ, ದುಗುಡ, ದುಮ್ಮಾನ, ದುಃಖ ನಮ್ಮೊಳಗಿದೆ. ಆದ್ದರಿಂದ ಅದರ ಆಘಾತ ನಮ್ಮ ಕೃತಿಯ ರೂಪದಲ್ಲಿ ಬಂದಾಗ ಹೆಚ್ಚು ಆಪ್ಯಾಯ ಮಾನವಾಗಿರುತ್ತದೆ.

ವೇದಿಕೆಯಲ್ಲಿ ಆ.ರಾ.ಶ್ರೀನಿವಾಸ. ಪ್ರತಿಭಾ ಎಮ್.ವಿ.ಡಾ// ಜಯಪ್ರಕಾಶ್ ಮಾವಿನಕುಳಿ. ಜಯಪ್ರಕಾಶ್ ತಲವಾಟ.ಹಾಜರಿದ್ದರು. ಸ್ವಾಗತ ಹಾಗೂ ನಿರೂಪಣೆಯನ್ನು ರಾಘವೇಂದ್ರ ತಾಳಗುಪ್ಪ ಪರಮೇಶ್ವರ್ ದೂಗುರು ವಂದನಾರ್ಪಣೆ ಮಾಡಿದರು. ಸಹಕಾರವನ್ನು ಡಿ.ಎಮ್.ಪಿ.ಸಿ. ಅಧ್ಯಕ್ಷರು ಹಾಗೂ ಸದಸ್ಯರು ನೀಡಿದ್ದರು.

# ಕೇಂದ್ರ ಸಚಿವ ವಿ.ಸೋಮಣ್ಣ

## ಕೊರಟಗೆರೆ ಪ್ರತಿಷ್ಠಿತ ಮಠಗಳಿಗೆ ಭೇಟಿ..

ಪುಟ 1ರಿಂದ ರೈಲ್ವೆ ಕಾಮಗಾರಿ ಇನ್ನ ಕೇವಲ 20 ದಿನಗಳಲ್ಲಿ ಪ್ರಾರಂಭಿಸಲಾಗುವುದು, ಕಾಮಗಾರಿ ಪ್ರಾರಂಭದ ನಂತರ ಅತಿ ಶೀಘ್ರವಾಗಿ ಪೂರ್ಣಗೊಳಿಸಲು ಶ್ರಮವಿಸಲಾಗುವುದು, ನೀರಾವರಿ ಯೋಜನೆಗಳಿಗೂ ಸಹ ಹೆಚ್ಚಿನ ಆದ್ಯತೆ ನೀಡಲಾಗುವುದು, ಎರಡು ಪಕ್ಷಗಳ ಮುಖಂಡರು ಹಾಗೂ ಕಾರ್ಯಕರ್ತರ ಶ್ರಮದಿಂದ ಕೊರಟಗೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 25,000ಕ್ಕೂ ಹೆಚ್ಚು ಅಂತರಗಳ ಮತದಿಂದ ನನ್ನನ್ನು ಆಯ್ಕೆ ಮಾಡಿದ್ದಾರೆ ಮತದಾರರಿಗೆ ಧನ್ಯವಾದಗಳು ಸಲಿಸುತ್ತೇನೆ.

ಅಭೂತಪೂರ್ವ ಸ್ವಾಗತ ದೊರಕಿದ್ದು, ದಾರಿ ಉದ್ಧಕ್ಕೂ ಬಹುತೇಕ ಹಳ್ಳಿಗಳಲ್ಲಿ ವಿ .ಸೋಮಣ್ಣ ಅವರಿಗೆ ಪಟಾಕಿ ಸಿಡಿಸಿ ಹೂಗುಚ್ಛ ಹಾರ ನೀಡುವ ಮುಖ್ಯೇನಾ ಭವ್ಯ ಸ್ವಾಗತ ಬಯಸಿದರು, ನಂತರ ಎಲೇರಾಂಪುರ ಕುಂಚಿಟಿಗ ಮಹಾ ಮಠಕ್ಕೆ ಹಾಗೂ ಸಿದ್ದರಬೆಟ್ಟದ ಶ್ರೀ ರಂಭಾಪುರಿ ಮಠಕ್ಕೆ ಭೇಟಿ ನೀಡಿ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮೀಜಿಗಳು ಹಾಗೂ ಡಾ .ಶ್ರೀ ಹನುಮಂತನಾಥ ಸ್ವಾಮೀಜಿಗಳಿಂದ ಆಶೀರ್ವಾದ ಪಡೆದರು.

ಕೇಂದ್ರ ಸಚಿವ ವಿ ಸೋಮಣ್ಣ ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ಆಗಮಿಸಿದ ಸಂದರ್ಭದಲ್ಲಿ ಬಿಜೆಪಿ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಸೋಮಣ್ಣನವರ ಭೇಟಿಗೆ ದಾರಿ ಉದ್ದಕ್ಕೂ ಕಾದು ನಿಂತಿದ್ದು ಕಂಡುಬಂತು ಜೊತೆಗೆ ಬಿಜೆಪಿ ಕಾರ್ಯಕರ್ತರಿಗಿಂತಲೂ ಹೆಚ್ಚಾಗಿ ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರಲ್ಲಿ ಹೆಚ್ಚು ಹುಮ್ಮಸ್ಸು ಕಂಡುಬಂದು ಬಿಜೆಪಿಗಿಂತ ಹೆಚ್ಚು ಜೆಡಿಎಸ್ ನವರೇ ವಿ ಸೋಮಣ್ಣನವರ ಗೆಲುವನ್ನ ಸಂಭ್ರಮಿಸಿದ್ದು ಸ್ಪಷ್ಟವಾಗಿತ್ತು. ಜೆಡಿಎಸ್ ನ ಮುಖಂಡರುಗಳು ಕಳೆದ ಎರಡು ಬಾರಿ ವಿಧಾನಸಭಾ ಚುನಾವಣೆಯಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಸೋಲು ಅನುಭವಿಸಿದ ಹಿನ್ನೆಲೆಯಲ್ಲಿ ಬಹಳ ರಾಜಕೀಯ ಹಿನ್ನಡೆ ಒಳಗಾಗಿ ಮನೆಯಲ್ಲಿ ಕೂತು ಹಾಗೂ ಊರುಗಳಲ್ಲಿ ಉಳಿದುಕೊಂಡು ಬಹಳ ನೋವು ಪಡೆಯುತ್ತಿದ್ದನ್ನ ಬಿಜೆಪಿ –ಜೆಡಿಎಸ್ ಸಮ್ಮಿಶ್ರ ಅಭ್ಯರ್ಥಿ ವಿ ಸೋಮಣ್ಣ ಗೆಲುವಿಗೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬಿಜೆಪಿಗಿಂತ ಹೆಚ್ಚು ಪಣತೊಟ್ಟು ದುಡಿದವರಂತೆ ಜೆಡಿಎಸ್ ನವರೇ ಕಂಡುಬಂದು ಬಿಜೆಪಿಯ ಸಂಘಟನೆಗಿಂತ ನಾವೇನು ಕಮ್ಮಿ ಇಲ್ಲ ಎನ್ನುವಂತೆ ಜಿದ್ದಿಗೆ ಬಿದ್ದವರಂತೆ ಚುನಾವಣೆ ಎದುರಿಸಿ ಗೆಲುವಿನ ನಂತರ ಅದೇ ಹುಮ್ಮಸ್ಸಿನಲ್ಲಿ ಬಿಜೆಪಿ ಅಭ್ಯರ್ಥಿಯೆಂಬುದನ್ನು ಲೆಕ್ಕಿಸದೆ ಜೆಡಿಎಸ್ ಅಭ್ಯರ್ಥಿ ಎನ್ನುವ ರೀತಿಯಲ್ಲಿ ಜೆಡಿಎಸ್ ನ ಮುಖಂಡರುಗಳು ತಂಡೋಪ ತಂಡವಾಗಿ ಮೊದಲ ಬಾರಿಗೆ ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ಆಗಮಿಸುತ್ತಿರುವ ಕೇಂದ್ರ ಸಚಿವ ವಿ ಸೋಮಣ್ಣನವರ ಸ್ವಾಗತಕ್ಕೆ ಮುಗಿಬಿದ್ದಿದ್ದು ಕಂಡುಬಂತು. ಈ ಸಂದರ್ಭದಲ್ಲಿ ವಿ ಸೋಮಣ್ಣನೊಂದಿಗೆ ಮಾಜಿ ಸಂಸದರಾದ ಜಿಎಸ್ ಬಸವರಾಜು, ಮಾಜಿ ಶಾಸಕ ಸೊಗಡು ಶಿವಣ್ಣ, ಮಧುಗಿರಿ ವೀರಭದ್ರಯ್ಯ, ಕೊರಟಗೆರೆ ಬಿಜೆಪಿ ಮುಖಂಡರಾದ ಬಿ ಎಚ್ ಅನಿಲ್ ಕುಮಾರ್, ಅಂಧಾನಪ್ಪ, ಬಿಜೆಪಿ ಅಧ್ಯಕ್ಷ ದರ್ಶನ್, ಜೆಡಿಎಸ್ ನ ಕಾರ್ಯದರ್ಶಿ ನರಸಿಂಹರಾಜು, ಜಿಲ್ಲಾ ಪಂಚಾಯತಿ ಸದಸ್ಯ ಶಿವರಾಮಯ್ಯ, ಮಾಜಿ ತಾ ಪಂ ಪ್ರಕಾಶ್, ಹನುಮಂತರಾಯಪ್ಪ ಸೇರಿದಂತೆ ಹಲವು ಮುಖಂಡರುಗಳು ಹಾಜರಿದ್ದರು.

# ಅದ್ದೂರಿ ಜಾತ್ರಾ ಮಹೋತ್ಸವ ಕಾರ್ಯಕ್ರಮ



ಕೋಲಾರ: ಸ್ವಸ್ತಿ ಶ್ರೀ ಕೋತಿ ಭಕ್ರುತು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ವೈಶಾಖ ಮಾಸದಂದು ಮುಳಬಾಗಿಲು ಅಂಬೇಡ್ಕರ್ ನಗರ ಮತ್ತು ಹೊಸ ಏಡಿ ಕಾಲೋನಿಯಲ್ಲಿ ಗಂಗ ಜಾತ್ರೆ ನಡೆಯಿತು. ಅಮ್ಮನವರ ಮೆರವಣಿಗೆ ಮತ್ತು ರಾತ್ರಿ 10 ಗಂಟೆಗೆ ದೀಪಾರಾಧನೆ ಅದ್ದೂರಿಯಾಗಿ ನಡೆಯಿತು. ಅಲ್ಲದೆ ಅಮ್ಮನವರಿಗೆ ಮಹಾಮಂಗಳಾರತಿ ತೀರ್ಥ ಪ್ರಸಾದ ವಿನಿಯೋಗ ಜರುಗಿತು. ಜೊತೆಗೆ ವಲಸೆ ದ್ಯಾವರ ಮತ್ತು ದೀಪಗಳ ಮೆರವಣಿಗೆ ಅದ್ದೂರಿಯಾಗಿ ನಡೆಯಿತು.

ಈ ಕಾರ್ಯಕ್ರಮಕ್ಕೆ ಕೆ.ವಿ.ಗೌತಮ್ ರವರು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು.ಈ ಜಾತ್ರ ಮಹೋತ್ಸವದ ಮೆರವಣಿಗೆಯಲ್ಲಿ ಎಲ್ಲಾ ಭಕ್ತಾದಿಗಳು ಭಾಗವಹಿಸಿದ್ದರು. ಈ ಕಾರ್ಯಕ್ರಮವನ್ನು ಅದ್ದೂರಿಯಾಗಿ ನಡೆಸಿಕೊಟ್ಟಂತಹ ಎಲ್ಲಾ ಭಕ್ತಾದಿಗಳಿಗೂ ಗಂಗಾ ಜಾತ್ರಾ ಆಚರಣೆ ಸಮಿತಿ ಅಂಬೇಡ್ಕರ್ ನಗರ ಮತ್ತು ಹೊಸ ಎ. ಡಿ.ಕಾಲೋನಿ ಮುಳಬಾಗಿಲುನವರು ಕೃತಜ್ಞತೆಗಳನ್ನು ಸಲ್ಲಿಸಿದರು.

ಈ ಶುಭ ಕಾರ್ಯಕ್ರಮಕ್ಕೆ ಭಕ್ತಾದಿಗಳು ಆಗಮಿಸಿ ದೇವರ ದರ್ಶನ ಪಡೆದು ತೀರ್ಥ ಪ್ರಸಾದ ಸ್ವೀಕರಿಸಿದರು. ದೇವರುಗಳ ಕೃಪಾಕಟಾಕ್ಷಕ್ಕೆ ಪಾತ್ರರಾದರು.

# ಇಲ್ಲಸಲ್ಲದ ಆರೋಪಗಳನ್ನ ಆರೋಪಿಸಿ ಸುಳ್ಳು ಪ್ರಕರಣವನ್ನು ದಾಖಲೆ



ಕೆ.ಆರ್.ಪೇಟೆ : ನಮ್ಮ ಪೂರ್ವಜರ ಕಾಲದಿಂದಲೂ ಅನುಭವಿರುವ ನಮ್ಮ ಜಮೀನನ್ನು ಕಬಳಿಸಲು ನಮ್ಮ ಕುಟುಂಬದ ಮೇಲೆ ಇಲ್ಲಸಲ್ಲದ ಆರೋಪಗಳನ್ನ ಆರೋಪಿಸಿ ಸುಳ್ಳು ಪ್ರಕರಣವನ್ನು ದಾಖಲಿಸಿದ್ದಾರೆ ಎಂದು ಮಹಿಳೆ ಜ್ಯೋತಿ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಕೆ.ಆರ್.ಪೇಟೆ ತಾಲ್ಲೂಕಿನ ಕಸಬಾ ಹೋಬಳಿಯ ಕುಂದನಹಳ್ಳಿ ಗ್ರಾಮದ ಸಮೀಪ ಬಿ.ಬಿ ಕಾವಲು ವ್ಯಾಪ್ತಿಯ ಸರ್ವೆ ನಂಬರ್ 1ರ ಎರಡು ಎಕ್ಕರೆ ಜಮೀನನ್ನು ಸುಮಾರು 50ಕ್ಕೂ ಹೆಚ್ಚು ವರ್ಷಗಳಿಂದಲೂ ಅನುಭವವಿರುವ ಜಮೀನನ್ನು ದೌರ್ಜನ್ಯ ಮತ್ತು ಹಣಬಲದಿಂದ ನಮ್ಮ ಜಮೀನನ್ನು ಕಬಳಿಸಲು ನಮ್ಮ ಜಮೀನಿನ ಪಕ್ಕದಲ್ಲಿರುವ ಕುಂದನಹಳ್ಳಿ ಗ್ರಾಮದ ಆಶಾ ಚಂದ್ರೇಗೌಡ ಅವರು ನಮ್ಮ ಕುಟುಂಬದ ಮೇಲೆ ಹಲ್ಲೆ ನಡೆಸಿ ಪೊಲೀಸ್ ಠಾಣೆಯಲ್ಲಿ ಇಲ್ಲಸಲ್ಲದ ಆರೋಪಗಳನ್ನು ಆರೋಪಿಸುವ ಮೂಲಕ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದು ಆರೋಪಿಸಿದರು.

ಬಳಿಕ ಮಾತನಾಡಿ ಗ್ರಾಮದ ಹಿರಿಯ ಮುಖಂಡ ಕುಮಾರ್ ಬಿ.ಬಿ ಕಾವಲ್ ಸರ್ವೆ ನಂಬರ್ 1ರಲ್ಲಿ ನಾವು ಕಂಡಂತೆ ಐವತ್ತಕ್ಕೂ ಹೆಚ್ಚು ವರ್ಷಗಳಿಂದಲೂ ಕೆ.ಆರ್. ಪೇಟೆ ನಿವಾಸಿಗಳಾದ ಪ್ರಮೀಳಾ ಕಾರ್ ಮಂಜೇಗೌಡ ಮತ್ತು ಜ್ಯೋತಿ ಗಂಗಾಧರ ಅವರೇ ಅನುಭವದಲ್ಲಿದ್ದಾರೆ. ಆದರೆ ಆಜು ಬಾಜಿನವರಿಂದ ಕಣ್ಣ ಪುಟ್ಟ ಸಮಸ್ಯೆಗಳಿಂದ ಈ ಸಮಸ್ಯೆ ಉದ್ಭವವಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಹಿರಿಯ ಮುಖಂಡ ಜಯರಾಮೇಗೌಡ, ಸಣ್ಣತಮ್ಮಯ್ಯ, ದೇವರಾಜು ಅರಸು, ಶ್ರೀನಿವಾಸ್ ಗೌಡ, ಸುಂದ್ರಯ್ಯ,ಬಂಡಿಹೊಳೆ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಹೆಗ್ಗಡಹಳ್ಳಿ ಕುಮಾರ್,ಶಿವಕುಮಾರ್,ಕದಿರ್, ದೇವರಾಜ್ ಅರಸು (ಐಯ್ಯಣ್ಣ)ಸುನಿಲ್ ಕುಮಾರ್,ನಟರಾಜು,ಪ್ರಮೀಳಾ, ಜೀವನ್, ಗಿರಿಜಾ,ಸೇರಿದಂತೆ ಇತರರಿದ್ದರು.

# ತಾಲ್ಲೂಕಿನಲ್ಲಿ ಬಕ್ರೀದ್ ಹಬ್ಬದ ಸಮಯದಲ್ಲಿ ಗೋಹತ್ಯೆ ನಡೆಯದಂತೆ ತಡೆಯಲು ಮನವಿ

ಸಾಗರ ತಾಲೂಕಿನಲ್ಲಿ ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಗೋಹತ್ಯೆ ನಡೆಯದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವಂತೆ ಒತ್ತಾಯಿಸಿ ಹಿಂದೂ ಜಾಗರಣಾ ವೇದಿಕೆ ಕಾರ್ಯಕರ್ತರು ಡಿವೈಎಸ್‌ಪಿ ಗೋಪಾಲಕೃಷ್ಣ ನಾಯಕ್ ಅವರಿಗೆ ಬುಧವಾರ ಮನವಿ ಸಲ್ಲಿಸಿದರು.



ಜಿಲ್ಲಾದ್ಯಂತ ಪೊಲೀಸ್ ಇಲಾಖೆ ಗೋಹತ್ಯೆ ತಡೆಯಲು ವಿಶೇಷ ಪ್ರಯತ್ನ ನಡೆಸುತ್ತಿರುವುದರಿಂದ ಕೆಲ ಪ್ರದೇಶದಲ್ಲಿ ಗೋಹತ್ಯೆ ನಿಯಂತ್ರಣದಲ್ಲಿದೆ. ಜೂ. 17ರಂದು ಬಕ್ರೀದ್ ಹಬ್ಬವಿದ್ದು, ಕಳೆದ ವರ್ಷ ಇದೇ ವೇಳೆ ಜಿಲ್ಲೆಯಲ್ಲಿ ಅತಿಹೆಚ್ಚು ಗೋಹತ್ಯಾ ಪ್ರಕರಣಗಳು ದಾಖಲಾಗಿದ್ದವು. ಈ ವರ್ಷ ಅಂತಹ ಘಟನೆ ನಡೆಯದಂತೆ ಇಲಾಖೆ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಮುಸ್ಲಿಂ ಬಾಹುಳ್ಯ ಇರುವ ತಾಲೂಕಿನ ಹಲವು ಭಾಗಗಳಲ್ಲಿ ಬಕ್ರೀದ್ ಹಬ್ಬದ ಸಂದರ್ಭದಲ್ಲಿ ನೂರಾರು ಗೋವುಗಳನ್ನು ಹತ್ಯೆ ಮಾಡಲು ತಂದು ಕಟ್ಟಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಗೋವಿನ ಮಾಲಿಕತ್ವದ ಪರವಾನಗಿಗಳು ಅವರ ಬಳಿ ಇದೆಯೋ, ಇಲ್ಲವೋ ಎಂಬುದನ್ನು ಪರಿಶೀಲಿಸಿ ಇಲಾಖೆ ಗೋವುಗಳ ರಕ್ಷಣೆಗೆ ಮುಂದಾಗಬೇಕು. ಮಾಲಿಕತ್ವ ಪರವಾನಗಿ ಇಲ್ಲದವರ ವಿರುದ್ಧ ಸೂಕ್ತ ಕಾನೂನುಕ್ರಮ ಜರುಗಿಸುವುದು ಮತ್ತು ಗೋವುಗಳ ರಕ್ಷಣೆ ಮಾಡಬೇಕು. ಮುಸ್ಲಿಮರು ಹೆಚ್ಚಿರುವ ಪ್ರದೇಶಗಳಲ್ಲಿ, ಪ್ರಮುಖ ರಸ್ತೆಗಳಲ್ಲಿ ಚೆಕ್‌ಪೋಸ್ಟ್ ನಿರ್ಮಿಸಿ ಗೋವುಗಳ ಅಕ್ರಮ ಸಾಗಾಣಿಕೆ ನಡೆಯದಂತೆ ತಡೆಯಬೇಕೆಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಈ ಸಂದರ್ಭದಲ್ಲಿ ವೇದಿಕೆ ಜಿಲ್ಲಾ ಸಹ ಸಂಚಾಲಕ ಕೆ.ಎಚ್. ಸುಧೀಂದ್ರ, ಪ್ರಮುಖರಾದ ಕೋಮಲ್ ರಾಘವೇಂದ್ರ, ನಂದೀಶ್, ರಾಘವೇಂದ್ರ ಕಾಮತ್, ಗಣೇಶ್ ಮೊದಲಾದವರಿದ್ದರು.

# ಉಚಿತ ನೋಟ್‌ಬುಕ್ ವಿತರಣೆ



ನಮ್ಮ ಸರಕಾರಿ ಕನ್ನಡ ಗಂಡು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆ ಹೊನವಾಡ ತಿಕೋಟಾ ತಾಲ್ಲೂಕಿನ ಹೊನವಾಡ – ಗ್ರಾಮದ ನಮ್ಮ ಸರಕಾರಿ ಕನ್ನಡ ಗಂಡು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆ ಹೊನವಾಡ, ಮಕ್ಕಳಿಗೆ 525 ಕಿಂಗ್‌ಸೈಜ್ ನೋಟಬುಕ್‌ಗಳನ್ನು ಉಚಿತವಾಗಿ ವಿತರಿಸಲಾಯಿತು.

ಮುಂಬೈ ಮೂಲದ ತಾಪಿದಾಸ ತುಳಸಿದಾಸ ಹಾಗೂ ವೃಜದಾಸ ಎಂಬ ಮುಂಬೈ ಮೂಲದ ಚಾರಿಟೆಬಲ್ ಟ್ರಸ್ಟ್ ಇವರು ಪ್ರತಿ ವರ್ಷ ಸಾವಿರಾರು ಬಡ ಮಕ್ಕಳಿಗೆ ಶೈಕ್ಷಣಿಕವಾಗಿ ಮುಂದುವರೆಯಲು ಹಲವಾರು ವರ್ಷಗಳಿಂದ ಸಾಕಷ್ಟು ಉತ್ತೇಜನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಕೆಲ ಶಾಲೆಗಳಿಗೆ ಧ್ವನಿವರ್ಧಕ, ಸ್ಮಾರ್ಟಬೋರ್ಡ, ಪ್ರಿಂಟರ್, ಕಂಪ್ಯೂಟರ್ ಮತ್ತು ನೋಟಬುಕ್‌ಗಳನ್ನು ಉಚಿತವಾಗಿ ವಿತರಿಸಿರುತ್ತಾರೆ. ಚಾರಿಟೆಬಲ್ ಟ್ರಸ್ಟ್‌ದ ಸಂಯೋಜಕರಾದ ಶ್ರೀ ವಿಶ್ವನಾಥ ಸಿಂದಗಿ ದಂಪತಿಗಳು ಮಕ್ಕಳಿಗೆ

ಉಚಿತವಾಗಿ ನೋಟಬುಕ್‌ಗಳನ್ನು ಹಂಚುವುದರೊಂದಿಗೆ ಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಉಚಿತವಾಗಿ ನೀಡುವ ಭರವಸೆಯನ್ನು ನೀಡಿದರು.

ಶಾಲಾ ಮುಖ್ಯಗುರುಗಳಾದ ಶ್ರೀಮತಿ ಕೆ ಪಿ ಕುಮಶಳ್ಳಿ ಇವರು ಉಪಸ್ಥಿತರಿದ್ದು ಶ್ರೀ ಬಿ ಕೆ ಬಿರಾದಾರ ಶಿಕ್ಷಕರು ಸ್ವಾಗತಿಸಿದರು. ಶಾಲಾ ಅಭಿವೃದ್ಧಿ ಅಧ್ಯಕ್ಷ ಶ್ರೀ ಸೀತಾರಾಮ ನರಳೆ ಅಧ್ಯಕ್ಷತೆ ವಹಿಸಿದ್ದರು ಉಪಾಧ್ಯಕ್ಷರಾದ ಶ್ರೀಮತಿ ಸುನಂದಾ ಶಿವಾನಂದ ಪತ್ತಾರ ಸದಸ್ಯರಾದ ಶ್ರೀ ಶಂಕರ ನರಳೆ ಶ್ರೀ ರಾಜು ತುಪ್ಪದ ಉಪಸ್ಥಿತರಿದ್ದು.

ಈ ಸಂದರ್ಭದಲ್ಲಿ ವಿಶ್ವನಾಥ ಸಿಂದಗಿ ರವರಿಗೆ ಶಾಲೆಯ ವತಿಯಿಂದ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲೆಯ ಸರ್ವ ಗುರುಗಳು/ಗುರುಮಾತೆಯರು ಹಾಗೂ ಶಾಲಾ ಅಭಿವೃದ್ಧಿ ಸಮಿತಿ ಸದಸ್ಯರು ಕಾರ್ಯಕ್ರಮದಲ್ಲಿ ಹಾಜರಿದ್ದರು. ಶಿಕ್ಷಕ ಶ್ರೀ ಎಚ್ ಎನ್ ಮೊಹಿತೆ ವಂದಿಸಿದರು.

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ-ಪೇಪರ್: www.munjanevarth.com
ಶನಿವಾರ 15 ಜೂನ್ 2024
Saturday 15 June 2024

# ಹಲವು ವರುಷಗಳ ನಂತರ ಕಾಂಗ್ರೆಸ್ ಲೋಕಸಭಾ ಖಾತೆ

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ನೂತನ ಸಂಸದ ಶ್ರೀ ಯುತ ಶ್ರೇಯಸ್ ಪಾಟೀಲ್ ರವರು, ಹಲವು ವರುಷಗಳ ನಂತರ ಕಾಂಗ್ರೆಸ್ ಲೋಕಸಭಾ ಖಾತೆಯನ್ನು ತೆರೆದಿದೆ ಇದು ಬಹಳ ಹರ್ಷದಾಯಕ. ತಾತ ದಿವಂಗತ ಪುಟ್ಟಸ್ವಾಮಿ ಗೌಡರ ಆಶೀರ್ವಾದ ಹಾಗೂ ಹಾಸನ ಜನತೆ ಆಶೀರ್ವಾದ ನನ್ನ ಮೇಲಿದೆ ಹಾಗಾಗಿ ಈ ಭಾರಿ ಬದಲಾವಣೆ ಬಯಸಿ ಜನತೆ ಆಶೀರ್ವಾದ ಮಾಡಿ ಆಯ್ಕೆ ಮಾಡಿದ್ದಾರೆ,



ಅದಕ್ಕೆ ಬದ್ಧನಾಗಿ ಕೆಲಸ ನಿರ್ವಹಿಸುತ್ತೇನೆ. ಯಾವ ಕಾರ್ಯಕರ್ತರಿಗೂ ಚುತಿ ಬಾರದಂತೆ ನಡೆದುಕೊಳ್ಳುತೇನೆ ಆ ನಿಟ್ಟಿನಲ್ಲಿ ನಿಮ್ಮ ಸಲಹೆ ಅಗತ್ಯ ಇನ್ನೂ ಮುಂದೆ ಪಕ್ಷವನ್ನು ಬಲಪಡಿಸುವ ಜವಾಬ್ದಾರಿ ನಮ್ಮ ಮೇಲಿದೆ ಆ ನಿಟ್ಟಿನಲ್ಲಿ ಎಲ್ಲರೂ ಕಾರ್ಯಪ್ರವೃತ್ತರಾಗಬೇಕು.

ನನ್ನ ಸಂಸದೀಯ ಸ್ಥಾನದಲ್ಲಿ ಎಷ್ಟೆಲ್ಲಾ ಸಾರ್ವಜನಿಕ ಕೆಲಸ ಮಾಡಲು ಸಾಧ್ಯವೋ ಅದನ್ನು ಮನಪೂರ್ವಕವಾಗಿ ನಿರ್ವಹಿಸುವೆ. ನಮ್ಮ ತಾತ ಚುನಾವಣೆಯಲ್ಲಿ ಗೆದ್ದಾಗಲೂ ನಮ್ಮ ಆಲೂರು ತಾಲೂಕು ಕಾಂಗ್ರೆಸ್ ಕಾರ್ಯಕರ್ತರು ಜಿಲ್ಲೆಯಲ್ಲೇ ಮೊದಲಬಾರಿ ಅಭಿನಂದಿಸಿದ್ದರು ಈಗ ನನ್ನ ಗೆಲುವನ್ನು ಮೊದಲ ಭಾರಿಗೆ ಅಭಿನಂದಿಸುತ್ತಿರುವುದು ಆಲೂರು ಜನತೆ ಹಾಗಾಗಿ ಆಲೂರು ಭಾಗದ ಎಲ್ಲಾ ಜನತೆಗೂ ಹಾಗೂ ನನ್ನ ನೆಚ್ಚಿನ ಕಾರ್ಯಕರ್ತರಿಗೂ ಮನ ಪೂರ್ವಕ ಅಭಿನಂದನೆಗಳು ಎಂದರು.

ಕಾರ್ಯಕ್ರಮದಲ್ಲಿ ಹಲವು ಗಣ್ಯರುಗಳು ಮಾತನಾಡಿ ಆಲೂರು ಸಕಲೇಶಪುರ ವಿಧಾನ ಸಭಾ ವ್ಯಾಪ್ತಿಯಲ್ಲಿ ಶತಮಾನದ ನಂತರ ಕಾಂಗ್ರೆಸ್ ಪತಾಕೆ ಹರಾಡುವಂತಾಗಿದೆ ಈ ಗೆಲುವಿಗೆ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು ಪಕ್ಷ ಬಲಪಡಿಸುವ ನಿಟ್ಟಿನಲ್ಲಿ ಎಲ್ಲಾ ತಾಲೂಕು ಕಾಂಗ್ರೆಸ್ ಕಾರ್ಯಕರ್ತರು ತಮ್ಮ ವೈಯಕ್ತಿಕ ಹಿತಾಸಕ್ತಿ ಬದಿಗೊತ್ತಿ ಒಟ್ಟಾಗಿ ಶ್ರಮಿಸಬೇಕಿದೆ ಮುಂಬರುವ ಎಲ್ಲಾ ಚುನಾವಣೆಗಳನ್ನು ಗಮನದಲಿಟ್ಟು ಪಕ್ಷದ ಗೆಲುವಿಗೆ ಶ್ರಮಿಸೋಣ ಎಂದು ಒಗ್ಗಟ್ಟಿನ ಮಂತ್ರ ಜಪಿಸಿದರು. ಹಾಗೂ ನೂತನ ಸಂಸದರಿಗೆ ಅಭಿನಂದನೆ ಅರ್ಪಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷರಾದ ತಾರ ಮೇಡಮ್, ತಾಲೂಕು ಮುಖಂಡರುಗಳಾದ ರಂಗನಾಥ್,

ಹೆಮ್ಮಿಗೆ ಮೋಹನ್,ಶಿವಮೂರ್ತಿ, ರಂಗಸ್ವಾಮಿ, ಶಾಂತಕೃಷ್ಣ,ಸಣ್ಣಸ್ವಾಮಿ, ರವಿ ಕಾರ್ಜುವಳ್ಳಿ ಹಾಗೂ ತಾಲೂಕಿನ ಎಲ್ಲಾ ಕಾಂಗ್ರೆಸ್ ಮುಖಂಡರುಗಳು ಭಾಗಿಯಾಗಿದ್ದರು.

# ಡಯಾಲಿಸಿಸ್ ಘಟಕಗಳನ್ನು ಉದ್ಘಾಟಿಸಿದ ಶಾಸಕ ಎ.ಆರ್.ಕೃಷ್ಣಮೂರ್ತಿ

ಯಳಂದೂರು ಪಟ್ಟಣದ ತಾಲ್ಲೂಕು ಆಸ್ಪತ್ರೆಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಡಯಾಲಿಸಿಸ್ ಘಟಕಗಳ ಕಟ್ಟಡವನ್ನು ಶಾಸಕರಾದ ಎ ಆರ್ ಕೃಷ್ಣಮೂರ್ತಿರವರು ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ.ಚಿದಂಬರಂ ಅವರ ಜೊತೆಗೂಡಿ ಡಯಾಲಿಸಿಸ್ ಕೇಂದ್ರವನ್ನು ಉದ್ಘಾಟಿಸಿದರು.



ಈ ವೇಳೆ ಮಾಧ್ಯಮ ಮಿತ್ರರನ್ನು ಉದ್ದೇಶಿಸಿ ಮಾತನಾಡಿದ ಶಾಸಕರು 2024–2025 ನೇ ಸಾಲಿನ ಎಸ್.ಪಿ.ಎಸ್, ಎಸ್.ಪಿ. ಮತ್ತು ಟಿ.ಎಸ್.ಪಿ. ಯೋಜನೆಯಡಿ ನನ್ನ ಮತಕ್ಷೇತ್ರ ವ್ಯಾಪ್ತಿಯ ಗೌಡಹಳ್ಳಿ , ಹೊನ್ನೂರು, ಅಗರ– ಮಾಂಬಳ್ಳಿ, ಚಿಲಕವಾಡಿ ಹಾಗೂ ಹೊಂಗನೂರು, ಇರಸವಾಡಿ, ಉಮ್ಮತ್ತೂರು, ಬಾಗಳಿ, ಕುದೇರು ಮತ್ತು ಕಜ್ಜಿಹುಂಡಿ, ಟಿ. ಹೊಸೂರು ಗ್ರಾಮಗಳ ಆರೋಗ್ಯ ಕೇಂದ್ರಗಳ ಕಟ್ಟಡ ಹಾಗೂ ಕಾಂಪೌಂಡ್ ಮತ್ತು ಕುಡಿಯುವ ನೀರಿನ ವ್ಯವಸ್ಥೆಗಳ ನಿರ್ಮಾಣಕ್ಕೆ ಅನುದಾನ ಬಿಡುಗಡೆಗೆ ಮನವಿ ಸಲ್ಲಿಸಲಾಗಿದೆ ಎಂದು ತಿಳಿಸಿದರು

ಈ ಸಂದರ್ಭದಲ್ಲಿ ತಾಲ್ಲೂಕು ವೈದ್ಯಾಧಿಕಾರಿ ಗಳಾದ ಡಾ.ಶ್ರೀಧರ್ , ಡಾ.ನಾಗೇದ್ರ.ಹಾಗೂ ಆರೋಗ್ಯ ಇಲಾಖೆ ಸಿಬ್ಬಂದಿ ವರ್ಗದವರು ಜಿಲ್ಲಾ ಗ್ಯಾರಂಟಿ ಯೋಜನೆಗಳ ಸಮಿತಿ ಅಧ್ಯಕ್ಷರಾದ ಹೆಚ್.ವಿ.ಚಂದ್ರು, ಜಿಲ್ಲಾ ಪಂಚಾಯತಿ ಮಾಜಿ ಸದಸ್ಯರಾದ ಜೆ. ಯೋಗೇಶ್ , ಮಾಜಿ ತಾಲ್ಲೂಕು ಪಂಚಾಯತಿ ಅಧ್ಯಕ್ಷರಾದ ನಿರಂಜನ್ , ಪಟ್ಟಣದ ಪಂಚಾಯತಿ ಸದಸ್ಯರಾದ ಪ್ರಭಾವತಿ ರಾಜ್ ಶೇಖರ್, ರಂಗನಾಥ್, ಮಹೇಶ್, ರವಿ, ಮಲ್ಲು, ನಿಂಗರಾಜು, ಮುಖಂಡರಾದ ಕಂದಹಳ್ಳಿ ನಂಜುಂಡಸ್ವಾಮಿ, ಹೊನ್ನೂರು ರಾಘು, ಹಾಗೂ ಸಾರ್ವಜನಿಕರು ಹಾಜರಿದ್ದರು

# ಪ್ರತಿ ವರ್ಷದಂತೆ ಅದ್ದೂರಿಯಾಗಿ ಕೆಂಪೇಗೌಡ ಜಯಂತಿ ಆಚರಣೆ: ಕೆ.ವೈ.ನಂಜೇಗೌಡ



ಮಾಲೂರು: ಬೆಂಗಳೂರು ನಿರ್ಮಾತ ನಾಡಪ್ರಭು ಕೆಂಪೇಗೌಡರ 515ನೇ ಜಯಂತಿಯನ್ನು ಇದೇ 27ರಂದು ಎಲ್ಲಾ ಸಮುದಾಯಗಳ ಸಹಕಾರದಲ್ಲಿ ಅದ್ದೂರಿಯಾಗಿ ಅಚರಣೆ ಮಾಡಲಾಗುವುದು ಎಂದು ಶಾಸಕ ಕೆ.ವೈ.ನಂಜೇಗೌಡ ಹೇಳಿದರು.

ಪಟ್ಟಣದ ತಾಲ್ಲೂಕು ಕಚೇರಿ ತಹಶೀಲ್ದಾರ್ ರವರ ಸಭಾಂಗಣದಲ್ಲಿ ತಾಲ್ಲೂಕು ಆಡಳಿತ ಹಾಗೂ ತಾಲ್ಲೂಕು ಒಕ್ಕಲಿಗರ ಸಂಘದ ವತಿಯಿಂದ ಹಮ್ಮಿಕೊಂಡದ್ದ ನಾಡ ಪ್ರಭು ಕೆಂಪೇಗೌಡ ಅವರ 515 ನೇ ಜಯಂತಿ ಅಚರಣೆಯ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಪ್ರತಿ ವರ್ಷದಂತೆ ಈ ಭಾರಿಯು ತಾಲ್ಲೂಕು ಆಡಳಿತ ಹಾಗೂ ಸಮುದಾಯದ ವತಿಯಿಂದ ತಾಲ್ಲೂಕು ಕಚೇರಿಯಲ್ಲಿ ಕೆಂಪೇಗೌಡರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ನಂತರ ಕೆಂಪೇಗೌಡರ ಮುತ್ತಿನ ಪಲ್ಲಕ್ಕಿಗಳಿಗೆ ಚಾಲನೆ ನೀಡಲಾಗುವುದು. ತಮಟೆ ವಾದ್ಯಗಳು, ವಿವಿಧ ಕಲಾತಂಡಗಳೊಂದಿಗೆ ಪಲ್ಲಕ್ಕಿಗಳು ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಲಾಗುವುದು ಎಂದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಕೆ.ರಮೇಶ್, ತಾ.ಪಂ.ಇಒ ಕೃಷ್ಣಪ್ಪ, ಪೊಲೀಸ್ ಪಿ.ಐ.ವಸಂತ್, ಬಿಇಒ ಚಂದ್ರಕಲಾ, ಸಮುದಾಯದ ಮುಖಂಡರಾದ ರಾಮೇಗೌಡ, ಹನುಮಂತಪ್ಪ, ಕ್ಷೇತ್ರನಹಳ್ಳಿ ವೆಂಕಟೇಶ್ ಗೌಡ, ದಿನೇಶ್ ಗೌಡ, ಬೆಳ್ಳಾವಿ ಸೋಮಣ್ಣ, ಲಕ್ಷ್ಮೀನಾರಾಯಣ್, ಮಡಿವಾಳ ಚಂದ್ರಶೇಖರ್, ಬನಹಳ್ಳಿ ಸತೀಶ್, ಗ್ರಾ.ಪಂ.ಅಧ್ಯಕ್ಷರಾದ ಪಿ.ಎಸ್.ವಿನಯ್ ಗೌಡ, ಮಿಂಡಹಳ್ಳಿ ಮುನೇಗೌಡ, ಸರಕಾರಿ ನೌಕರರ ಸಂಘದ ಅಧ್ಯಕ್ಷ ವಿ.ಮುನೇಗೌಡ, ಯೋಜನಾ ಪ್ರಾಧಿಕಾರದ ಮುಹಮ್ಮದ್ ನಯೀಂ, ಸಿ.ಲಕ್ಷ್ಮೀನಾರಾಯಣ್, ಎಂ.ವಿ.ಸೋಮಣ್ಣ, ದಲಿತ ಮುಖಡರಾದ ಪ್ರೇಂಡ್ಸ್ ಸಂತೋಷ್, ಎಸ್.ಎಂ.ವೆಂಕಟೇಶ್, ಕಾಕಪ್ಪ, ನರಸಿಂಹಗೌಡ, ಬಾಳಿಗಾನಹಳ್ಳಿ ಶ್ರೀನಿವಾಸ್, ದಿನ್ನಹಳ್ಳಿ ರಮೇಶ್, ಪರಮೇಶ್, ಡಿ.ಕೆ.ನಾಗರಾಜ್, ತಿಮ್ಮರಾಯಪ್ಪ, ಪುರಸಭಾ ಮುಖ್ಯಾಧಿಕಾರಿ ಪ್ರದೀಪ್, ಯೋಜನಾ ಪ್ರಾಧಿಕಾರದ ಕಾರ್ಯದರ್ಶಿ ಕೃಷ್ಣಪ್ಪ, ಜಿ.ನಾರಾಯಣಸ್ವಾಮಿ, ಶಿವಕುಮಾರ್, ಧನಲಕ್ಷ್ಮೀ, ಬೈರಾರೆಡ್ಡಿ, ಡಾ.ಮಂಜುನಾಥ್, ಹರಿಪ್ರಸಾದ್ ಸೇರಿದಂತೆ ಹಲವಾರು ಮುಖಂಡರು ಹಾಜರಿದ್ದರು.

# ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ತಿ.ನರಸೀಪುರ:–ಪ್ರಸಕ್ತ ವರ್ಷದ(2023–24) ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಗಳಿಸಿದ ತಾಲ್ಲೂಕಿನ ನಾಯಕ ಸಮುದಾಯದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ ಮಾಡಲಾಗಿದೆ ಎಂದು ತಾಲ್ಲೂಕು ನಾಯಕ ನೌಕರರ ಸಂಘದ ಅಧ್ಯಕ್ಷ ಆರ್.ರಾಜು ತಿಳಿಸಿದ್ದಾರೆ.

ಪಟ್ಟಣದ ಮಹರ್ಷಿ ವಾಲ್ಮೀಕಿ ಶಿಕ್ಷಣ ಸಂಸ್ಥೆಯಲ್ಲಿ ಪತ್ರಿಕಾ ಹೇಳಿಕೆ ನೀಡಿ ಮಾತನಾಡಿದ ಆರ್.ರಾಜು ಪ್ರತಿ ವರ್ಷದಂತೆ ಈ ಬಾರಿಯೂ ಸಹ ನಾಯಕ ಸಮುದಾಯದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ತಾಲ್ಲೂಕು ನಾಯಕ ಸಂಘ,ನಾಯಕ ನೌಕರರ ಸಂಘ ಹಾಗೂ ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಗಳ ವತಿಯಿಂದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ



ಇದರ ಸದುಪಯೋಗವನ್ನು ಸಮುದಾಯದ ವಿದ್ಯಾರ್ಥಿಗಳು ಬಳಸಿಕೊಳ್ಳಬೇಕು ಎಂದರು.

ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ತಿ.ನರಸೀಪುರ ತಾಲ್ಲೂಕಿನವರಾಗಿದ್ದು 2023–24 ನೇ ಸಾಲಿನ ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿ.ಯು.ಸಿ.ವಾರ್ಷಿಕ ಪರೀಕ್ಷೆಯಲ್ಲಿ ಶೇ.85 ಕ್ಕಿಂತ ಹೆಚ್ಚು ಅಂಕ ಪಡೆದಿರಬೇಕು ವಿದ್ಯಾರ್ಥಿಗಳು ನಾಯಕ ಸಮುದಾಯಕ್ಕೆ ಸೇರಿರಬೇಕು,ವಿದ್ಯಾರ್ಥಿಗಳು ತಮ್ಮ ಸ್ವ– ವಿಳಾಸ ಮತ್ತು ದೂರವಾಣಿ ಸಂಖ್ಯೆಯೊಂದಿಗೆ ,ಇತ್ತೀಚಿನ ಎರಡು ಭಾವಚಿತ್ರ,ಅಂಕಪಟ್ಟಿ ಹಾಗೂ ಜಾತಿ ಪ್ರಮಾಣ ಪತ್ರದ ನಕಲುಗಳ ದೃಡೀಕೃತ ದಾಖಲೆಗಳೊಂದಿಗೆ ದಿನಾಂಕ 04–07–2024 ರ ಒಳಗೆ ಅರ್ಜಿ ಸಲ್ಲಿಸಬಹುದು

ಕಾರ್ಯಕ್ರಮ ಜು.07 ಭಾನುವಾರ ಬೆಳಿಗ್ಗೆ 11 ಗಂಟೆಗೆ ತಾಲ್ಲೂಕು ನಾಯಕ ಸಂಘದ ಆವರಣದಲ್ಲಿ ನಡೆಯಲಿದೆ.

ಅರ್ಜಿ ಸಲ್ಲಿಸುವ ವಿಳಾಸ:– ಮಹರ್ಷಿ ವಾಲ್ಮೀಕಿ ಸ್ಕೂಲ್ (ರಾಮರೂಢ ಮಠ ಶ್ರೀ ರಾಮಪುರ ಬೀದಿ) ಹೆಚ್ಚಿನ ವಿವರಗಳಿಗೆ ಆರ್.ರಾಜು. ತಾಲ್ಲೂಕು ನಾಯಕ ನೌಕರರ. ಸಂಘ ಮೊಬೈಲ್ ಸಂಖ್ಯೆ 7026340955 ಸಂಪರ್ಕಿಸಲು ತಿಳಿಸಿದ್ದಾರೆ.

# ಲಂಚ: ಆಹಾರ ಇಲಾಖೆಯ ಉಪ ನಿರ್ದೇಶಕಿ, ಮಧ್ಯವರ್ತಿ ಲೋಕಾಯುಕ್ತ ಬಲೆಗೆ

ಬೆಂಗಳೂರು: ಪಡಿತರ ವಿತರಣೆ ಮಳಿಗೆಯ ಅಮಾನತು ಹಿಂಪಡೆಯಲು ಲಂಚಕ್ಕೆ ಬೇಡಿಕೆಯಿಟ್ಟಿದ್ದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪ ನಿರ್ದೇಶಕಿಯನ್ನು ಲೋಕಾಯುಕ್ತ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಪಡಿತರ




ವಿತರಣೆಯ ಪರವಾನಗಿ ಹೊಂದಿದ್ದ ಪುರುಷೋತ್ತಮ್.ವಿ ಎಂಬವರು ನೀಡಿದ ದೂರಿನನ್ವಯ ಕಾರ್ಯಾಚರಣೆ ನಡೆಸಿದ ಲೋಕಾ ಅಧಿಕಾರಿಗಳು ಬೆಂಗಳೂರು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪ ನಿರ್ದೇಶಕಿ ಪ್ರೀತಿ ಚಂದ್ರಶೇಖರ್ ಅವರನ್ನು ವಶಕ್ಕೆ ಪಡೆದಿದ್ದಾರೆ.

ದೂರುದಾರ ಪುರುಷೋತ್ತಮ್.ವಿ ಅವರು ಹೊಂದಿದ್ದ ಪಡಿತರ ವಿತರಣೆ ಮಳಿಗೆಯ ಪರವಾನಗಿಯನ್ನು ಅಮಾನತುಗೊಳಿಸಲಾಗಿತ್ತು. ಅಮಾನತು ಆದೇಶ ಹಿಂಪಡೆಯಲು 70 ಸಾವಿರ ರೂ.ಗೆ ಬೇಡಿಕೆಯಿಟ್ಟಿದ್ದ ಪ್ರೀತಿ ಚಂದ್ರಶೇಖರ್ ಮುಂಗಡವಾಗಿ 50 ಸಾವಿರ ರೂ ಪಡೆದುಕೊಂಡಿದ್ದರು. ಈ ಕುರಿತು ಪುರುಷೋತ್ತಮ್ ಅವರು ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರು.

ಈ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡು ಕಾರ್ಯಾಚರಣೆ ಕೈಗೊಂಡ ಅಧಿಕಾರಿಗಳು, ಬಾಕಿ 20 ಸಾವಿರ ರೂ ಸ್ವೀಕರಿಸುತ್ತಿದ್ದ ಮಧ್ಯವರ್ತಿ ರಮೇಶ್ ಎಂಬಾತನನ್ನು ವಶಕ್ಕೆ ಪಡೆದರು. ಬಳಿಕ ಆತ ನೀಡಿದ ಮಾಹಿತಿ ಆಧರಿಸಿ ಕಂದಾಯ ಭವನದಲ್ಲಿದ್ದ ಪ್ರೀತಿ ಚಂದ್ರಶೇಖರ್ ಅವರನ್ನು ವಶಕ್ಕೆ ಪಡೆದಿದ್ದಾರೆ.



ಹಾಸನ: ಚಿತ್ರನಟ ದರ್ಶನ್ ಆರೋಪಿಯಾಗಿರುವ ರೇಣುಕಾಸ್ವಾಮಿ ಹತ್ಯೆ ಖಂಡಿಸಿ ಹಾಸನದಲ್ಲಿ ವೀರಶೈವ ಲಿಂಗಾಯತ ಸಮಾಜದ ಸದಸ್ಯರು ವಿವಿಧ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ಪ್ರತಿಭಟನೆ ನಡೆಸಿದರು. ನಗರದ ಹೇಮಾವತಿ ಪ್ರತಿಮೆ ಬಳಿಯಿಂದ ಹೊರಟ ಪ್ರತಿಭಟನಾಕಾರರು ಎನ್.ಆರ್.ವೃತ್ತದ ಮೂಲಕ ಜಿಲ್ಲಾಧಿಕಾರಿ ಕಚೇರಿಗೆ ಆಗಮಿಸಿದರು. ಕೊಲೆಗಡುಕ ದರ್ಶನ್ ಎಂದು ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ರೇಣುಕಾಸ್ವಾಮಿಯನ್ನು ಅಮಾನುಷವಾಗಿ ಕೊಂದ ದರ್ಶನ್‌ನನ್ನು ಗಲ್ಲಿಗೇರಿಸಬೇಕು ಎಂದು ಆಗ್ರಹಿಸಿ ಜಿಲ್ಲಾಧಿಕಾರಿ ಸಿ.ಸತ್ಯಭಾಮ ಅವರಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಜವೇನಹಳ್ಳಿ ಮಠದ ಸಂಗಮೇಶ್ವರ ಸ್ವಾಮೀಜಿ, ತಣ್ಣೀರುಹಳ್ಳ ಮಠದ ವಿಜಯಕುಮಾರ ಸ್ವಾಮೀಜಿ, ವೀರಶೈವ ಲಿಂಗಾಯತ ಸಮಾಜದ ಮುಖಂಡರಾದ ಕಟ್ಟಾಯ ಶಿವಕುಮಾರ್, ರುದ್ರಕುಮಾರ್, ಶೋಭನ್ ಬಾಬು, ಹೇಮಂತ್, ಲತೇಶ್, ಬಿ.ಎ.ನಾಗೇಶ್ ಮುಂತಾದವರು ಭಾಗಿಯಾಗಿದ್ದರು

Printed by : H.L.AMARANATH, Owned by: H.L.AMARANATH, Printed at : SREE MANJUNATHA ENTERPRISES No. 7, Tirugappa lane, Cottonpet cross, Cottonpet, Bangalore-560053.
Published at : No.97, 2nd Cross, Vivekanandanagar, Khadi Commission Layout, BSK 3rd Stage, Kathariguppe Main Road, Bengaluru-560085. Mobile: 9663122276 Editor : H.L.AMARANATH